ಆಂತರಿಕ ಪ್ರಸಾರಕ್ಕಾಗಿ ಮಾತ್ರ

ಸಂಪುಟ 4 ಸಂಚಿಕೆ 5 ಸೆಪ್ಟಂಬರ್ 2011

India ECHOES
ONE WORLD ONE HUMANITY

ಶ್ರೀ ರಾಮಚಂದ್ರ ಮಿಷನ್

# ಗುರುಗಳ ಪ್ರವಾಸ



## ಮಲೇಶಿಯಾಕ್ಕೆ ಗುರುಗಳ ಭೇಟಿ, ಜೂನ್22 –27, 2011.

ಗುರುಗಳು ಸಿಂಗಾಪುರದಿಂದ ಹೊರಟು ಜೂನ್ 22ರ ಅಪರಾಹ್ನ ಮಲೇಶಿಯಾದಲ್ಲಿ ಬಂದಿಳಿದರು. ವಿಮಾನ ನಿಲ್ದಾಣದಿಂದ ಅವರು ನೇರವಾಗಿ ಕ್ಲಾಂಗ್‌ನಲ್ಲಿರುವ ಹೊಸ ಮಲೇಶಿಯಾ ಆಶ್ರಮವನ್ನು ಉದ್ಘಾಟಿಸಲು ಹೋದರು. ಆಗಮಿಸುವಾಗ ಗುರುಗಳು ಬಹಳ ಹರ್ಷಚಿತ್ತರಾಗಿದ್ದು, ಉಪಸ್ಥಿತರಿದ್ದ 200 ಅಭ್ಯಾಸಿಗಳನ್ನು ಅಭಿವಾದಿಸಿ ಆ ಕೂಡಲೇ ಸತ್ಸಂಗವನ್ನು ನಡೆಸಿಕೊಟ್ಟರು. ಅವರು ಆ ರಾತ್ರಿಯನ್ನು ಆಶ್ರಮದಲ್ಲಿ ಕಳೆದು, ಮರು ಬೆಳಗ್ಗೆ ಆಶ್ರಮದಿಂದ ಹತ್ತು ನಿಮಿಷಗಳ ಕಾರು ಪ್ರಯಾಣದ ದೂರವಿರುವ ಪ್ರೀಮಿಯರ್ ಹೋಟೆಲ್‌ನಲ್ಲಿ ವಿಚಾರಗೋಷ್ಠಿ ನಡೆಯುವ ಸ್ಥಳದಲ್ಲಿ ಎಲ್ಲ ಅಭ್ಯಾಸಿಗಳನ್ನು ಸೇರಿಕೊಂಡರು. ತನ್ನ ವಯಸ್ಸಿಗೆ ಬೇಕಾಗುವಂತೆ ಸಜ್ಜುಗೊಳಿಸದ ಹೋಟೆಲ್‌ನಲ್ಲಿ ಇರುವ ಭೌತಿಕ ಅನನುಕೂಲತೆಗಳೆಲ್ಲವುಗಳ ಹೊರತಾಗಿಯೂ ಗುರುಗಳು ವಿಚಾರಗೋಷ್ಠಿಯ ಅವಧಿಯಲ್ಲಿ ಅಲ್ಲೇ ಉಳಿದುಕೊಳ್ಳಲು ನಿರ್ಧರಿಸಿದರು.

23ರಂದು ಸಾಯಂಕಾಲದ ಸತ್ಸಂಗ 5 ಗಂಟೆಗೆ ನಿಗದಿತವಾಗಿತ್ತು, ಆದರೆ ಗುರುಗಳು 4.15 ಗಂಟೆಗಾಗಲೇ ದೊಡ್ಡ ಸಭಾಂಗಣದಲ್ಲಿ ಉಪಸ್ಥಿತರಿದ್ದು, ಅಭ್ಯಾಸಿಗಳನ್ನು ಭೇಟಿಯಾಗಲು ಮತ್ತು ವಿಚಾರಗೋಷ್ಠಿಯ ಸಿದ್ಧತೆಗಳನ್ನು ಪರಿಶೀಲಿಸಲು ಕಾತುರರಾಗಿದ್ದರು. ಭಾಗವಹಿಸಿದವರಿಗೆ ಹರ್ಷವುಕ್ಕಿಸುವಂತೆ ಗುರುಗಳು ಬೆಳಗಿನ ಮತ್ತು ಸಾಯಂಕಾಲದ ಎಲ್ಲ ಸತ್ಸಂಗಗಳನ್ನು ಸ್ವತಃ ನಡೆಸಿಕೊಟ್ಟರು. ಗುರುಗಳು ಲಿಫ್ಟ್‌ನಿಂದ ಸಭಾಂಗಣಕ್ಕೆ ಹೋಗುತ್ತಿದ್ದಂತೆ ಮಕ್ಕಳನ್ನು ಪ್ರೀತಿಯಿಂದ ಅಭಿವಾದಿಸಿದರು. ವಿಚಾರಗೋಷ್ಠಿಯು ಭಾಷಣಗಳು, ಸಭೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಕೂಡಿತ್ತು. “ಒಂದು ಹೃದಯ, ಒಂದು ಮನುಕುಲ” ಎಂಬುದು ವಿಚಾರಗೋಷ್ಠಿಯ ವಸ್ತುವಾಗಿದ್ದು ಅದನ್ನು ಐದು ಮಂದಿ ಭಾಷಣಕಾರರಾಗಿದ್ದ ಸೋ. ಕೃಷ್ಣ, ಸೋ. ಸಂತೋಷ್ ಖಾಂಜೀ, ಸೋ. ಕಮಲೇಶ್ ಪಟೇಲ್, ಸೋ. ಕಾಂಬಿರ್ಝ್, ಮತ್ತು ಸೋ. ಸತ್‌ಬೀರ್ ಇವರು ವಿವಿಧ ದೃಷ್ಟಿಕೋನಗಳಿಂದ ವಿಷಯಾಭಿಗಮನ ಮಾಡಿದ್ದು, ವಿಚಾರಪ್ರಚೋದಕವಾದ ಆ ಅಧಿವೇಶನಗಳಲ್ಲಿ ಗುರುಗಳು ಖುದ್ದಾಗಿ ಹಾಜರಿದ್ದರು.

ಗುರುಗಳು ಕೊನೆಯ ಸತ್ಸಂಗವನ್ನು 26ರ ರವಿವಾರ ಬೆಳಗ್ಗೆ ಮಲೇಶಿಯಾ ಆಶ್ರಮದಲ್ಲಿ ನಡೆಸಿಕೊಟ್ಟರು, ಮತ್ತು ಆ ದಿನ ಮಲೇಶಿಯಾ ಅಭ್ಯಾಸಿಗಳೆಲ್ಲರಿಗೂ ವೈಯಕ್ತಿಕ ಬೈಠಕ್ ನೀಡಲಾಗಿತ್ತು. ಮರುದಿನ ಜೂನ್ 27ರ ಬೆಳಗ್ಗೆ ಗುರುಗಳು ಚೆನ್ನೈಗೆ ಹೊರಟರು.

ಈ ಪ್ರವಾಸದಲ್ಲಿ ಗುರುಗಳ ಅನೌಪಚಾರಿಕ ಸಂಭಾಷಣೆಗಳಿಂದ ಕೆಲ ಉಲ್ಲೇಖಗಳು:

- ಜನರನ್ನು ದುಃಖಾರ್ತರನ್ನಾಗಿಸುವ ಎರಡು ವಿಷಯಗಳಾದ ಸಂಶಯಗಳು ಮತ್ತು ಆಸೆಗಳು ತನ್ನಲ್ಲಿ ಇಲ್ಲದಿರುವುದರಿಂದ ತಾನು ಸದಾ ಸಂತುಷ್ಟನೆಂದು ಗುರುಗಳು ಹೇಳಿದರು.
- ಒಬ್ಬ ಅಭ್ಯಾಸಿಯು, ಜನರನ್ನು ಭೇಟಿಯಾಗಲು ಗುರುಗಳ ಲಭ್ಯತೆಯ ಬಗ್ಗೆ ಕೇಳಿದಾಗ ಗುರುಗಳು, “ನಾನು ಎಲ್ಲವನ್ನೂ– ಎಲ್ಲಕಾಲವೂ ಮಾಡುವ ಸ್ಥಿತಿಯಲ್ಲಿದ್ದೇನೆ!” ಎಂದು ಒತ್ತಿಹೇಳಿದರು.
- ಬಾಬೂಜಿ ಮಹಾರಾಜರು ಹೇಳಿದ್ದಾರೆ, ಮಾನವರು ಪ್ರೇಮವನ್ನು ಅರಿತಿಲ್ಲ. ಪ್ರೇಮವು ಸೃಷ್ಟಿಕರ್ತ ಮತ್ತು ಸೃಷ್ಟಿಯಾದುದರ ಮಧ್ಯೆ ಮಾತ್ರ ಇರುತ್ತದೆ, ಸೃಷ್ಟಿಯಾದವುಗಳ ನಡುವೆ ಅಲ್ಲ. ಸೃಷ್ಟಿಯಾದವುಗಳ ಮಧ್ಯೆ ಇರುವುದು ಪ್ರೀತಿ ಮತ್ತು ಪರಸ್ಪರಾವಲಂಬನೆ ಮಾತ್ರ. ಅದನ್ನು ಪ್ರೇಮವೆಂದು ತಪ್ಪಾಗಿ ಹೆಸರಿಸಲಾಗಿದೆ.
- ವೇದನೆಯಿಲ್ಲದೆ ಒಬ್ಬ ಪ್ರೇಮಿಸಲಾರ. ಪ್ರೇಮವೆಂದರೆ ವೇದನೆ. ವೇದನೆ ಇಲ್ಲವಾದರೆ ಅಲ್ಲಿ ಪ್ರೇಮವಿರುವುದಿಲ್ಲ.
- ಆನಂದವು ಈ ಜಗತ್ತಿನೊಂದಿಗೆ ಸಂಬಂಧಿಸಿರದಂಥ ಸಂಗತಿಯಾಗಿದೆ. ಅದೊಂದು ಅವಸ್ಥೆ. ಸಂತೋಷ ಒಂದು ಅವಸ್ಥೆ ಅಲ್ಲ, ಬದಲಾಗಿ ಅದೊಂದು ಅನುಭವ, ಸುಖದ ಹಾಗೆ. ಪ್ರೇಮವೆಂದರೆ ವ್ಯಕ್ತಿ ಮತ್ತು ಆತನ ಸೃಷ್ಟಿಕರ್ತನ ನಡುವಿನ ಸಂಬಂಧದ ಒಂದು ಗುಣಧರ್ಮ, ಓರ್ವ ತಾಯಿ ಮತ್ತು ಅವಳ ಮಗುವಿನ ನಡುವಿನ ಪ್ರೀತಿಯ ಹಾಗೆ.





ಸಂಪುಟ 4 ಸಂಚಿಕೆ 5 ಸೆಪ್ಟಂಬರ್ 2011
ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ ವಾರ್ತಾಪತ್ರ



ಚೆನ್ನೈ, 2011ರ ಜೂನ್27ರಿಂದ ಜುಲೈ20ರ ವರೆಗೆ

ಗುರುಗಳನ್ನು ಚೆನ್ನೈ ವಿಮಾನ ನಿಲ್ದಾಣದಲ್ಲಿ ದೊಡ್ಡ ಸಂಖ್ಯೆಯ ಅಭ್ಯಾಸಿಗಳು ಸ್ವಾಗತಿಸಿದರು. ಅಲ್ಲಿಂದ ಗುರುಗಳು ನೇರವಾಗಿ ಮಣಪಾಕ್ಕಂ ಆಶ್ರಮಕ್ಕೆ ಹೋದರು. ತಮ್ಮ ಕುಟೀರವನ್ನು ತಲಪಿದಾಗ ಅವರು, “ನನಗೆ ಪ್ಲಗ್ ಹಾಕಿ ವಿದ್ಯುತ್ ಸಂಪರ್ಕಿಸಿದಂತೆ ಮತ್ತು ಈಗ ನಾನು ಪುನಃಶ್ಚೇತನಗೊಂಡಂತೆ ಅನಿಸುತ್ತಿದೆ” ಎಂದರು.

ಗುರುಗಳು ಕೆಲವು ಮದುವೆಗಳನ್ನು ನೆರವೇರಿಸಬೇಕಾಗಿದ್ದ ಜುಲೈ 1ರ ಕೆಲದಿನಗಳ ಹಿಂದೆ ಅವರು, “ಈ ದಿನ ಯಾವುದಾದರೂ ಮದುವೆಗಳನ್ನು ನೆರವೇರಿಸಲಿದೆಯೇ” ಎಂದು ಕೇಳಿದ್ದರು. ಅದು ಅಂದಲ್ಲ, ಬದಲಾಗಿ ಶುಕ್ರವಾರದಂದು ನಿಗದಿತವಾಗಿದೆ ಎಂದು ಅವರಿಗೆ ಹೇಳಲಾಯಿತು. ಆಗ ಗುರುಗಳು, “ನಾವು ಧ್ಯಾನಮಂದಿರದಲ್ಲಿ ಸತ್ಸಂಗ ಮಾಡದೆ ದೀರ್ಘಕಾಲವಾಯ್ತಲ್ಲ?” ಎಂದರು, ಮತ್ತು ತನಗೆ ಸತ್ಸಂಗವೊಂದನ್ನು ನಡೆಸಿಕೊಡುವ ಇಚ್ಛೆಯಾಗಿದೆಯೆಂದರು. ಅದೊಂದು ಥಟ್ಟನೆಯ ತೀರ್ಮಾನವಾಗಿತ್ತು ಮತ್ತು ಅವರು ಇಬ್ಬರು ಪ್ರಶಿಕ್ಷಕರನ್ನು ಮಾಡುವ, ಇಮೇಲ್‌ಗಳನ್ನು ನೋಡುವ, ಬೆಳಗಿನ ಉಪಾಹಾರ ಸೇವಿಸುವ –ತನ್ನೆಲ್ಲ ಕೆಲಸಗಳನ್ನು ಮುಗಿಸಿ ಸತ್ಸಂಗಕ್ಕೆ ಸಿದ್ಧರಾದರು. ಗುರುಗಳಿಗೆ ಮಾಡಲು ಕೆಲಸ ತುಂಬ ಇದ್ದಕಾರಣ ತಮ್ಮ ಶಯನಗೃಹ ಮತ್ತು ಕಛೇರಿಗಳ ನಡುವೆ ತೀರಾ ವೇಗದಿಂದ ಅವರು ನಡೆದಾಡುವುದು ನೋಡಲು ಅತ್ಯಾಶ್ಚರ್ಯಕರವಾಗಿತ್ತು.

ಒಂದು ದಿನ ಬೆಳಿಗ್ಗೆ, ಸೋದರರೊಬ್ಬರು ಬಂದು ಮುಖ್ಯವಾದ ಸಭೆಯೊಂದಕ್ಕೆ ಹಾಜರಿರಲು ತಾನು ಹೊರಗಡೆ ಹೋಗಬೇಕಾಗಿತ್ತೆಂದು ಗುರುಗಳೊಡನೆ ಹೇಳಿದರು. ಗುರುಗಳು, “ತಡವಾಗಿ ಹೋಗುವುದಕ್ಕಿಂತ ಬೇಗನೆ ಕಾಣಿಸಿಕೊಳ್ಳುವುದರಲ್ಲಿ ಜಾಣ್ಮೆಯಿದೆ.”ಎನ್ನುತ್ತ ಅವರಿಗೆ ಬೇಗನೆ ಹೋಗಲು ಹೇಳಿದರು.

ಭೇಟಿಯಾಗಲು ಬಂದ ದಂಪತಿಯೊಂದು ತಾವು ಮಗುವೊಂದನ್ನು ದತ್ತು ಸ್ವೀಕರಿಸಿದ್ದೇವೆ ಎಂದುದನ್ನು ಕೇಳಿ ಗುರುಗಳು ತುಂಬ ಸಂತೋಷಗೊಂಡು, “ಶಿಶುಗಳನ್ನು ದತ್ತಕ್ಕೆ ತೆಗೆದುಕೊಳ್ಳುವ ಜನರೆಂದರೆ ನನಗಿಷ್ಟ. ಈ ಜಗತ್ತಿನಲ್ಲಿ ಮನೆಯಿಲ್ಲದ ಮಕ್ಕಳು ತುಂಬಾ ಇದ್ದಾರೆ ಮತ್ತು ನಾನು ಯಾವಾಗಲೂ ಇದರ ಪರವಾಗಿದ್ದೇನೆ. ಆದರೆ ಯಾವುದೇ ಸಂದರ್ಭದಲ್ಲೂ ನೀವು ಮಗುವಿನಲ್ಲಿ ಅವನ/ಳನ್ನು ದತ್ತಕ್ಕೆ ತೆಗೆದುಕೊಂಡಿರುವುದಾಗಿ ಹೇಳಬಾರದು. ಅದು ಮಗುವಿನೊಳಗೆ ಹೇಗೋ ದಾಖಲಾಗುವುದರಿಂದಾಗಿ ಈ ಎಳೆಯ ವಯಸ್ಸಲ್ಲೂ ನೀವು ಅದನ್ನು ಹೇಳಬಾರದು. ಮಗುವನ್ನು ನಿಮ್ಮ ಸ್ವಂತದ್ದೆಂಬಂತೆ ನೋಡಿಕೊಳ್ಳಿ.” ಎಂದರು. ನಂತರದ ಸತ್ಸಂಗದಲ್ಲಿ ಆ ದಂಪತಿ ಭಾಗವಹಿಸಲನುವಾಗುವಂತೆ ಯಾರಾದರೂ ಮಗುವನ್ನು ನೋಡಿಕೊಳ್ಳುವರೆಂದು ಅವರು ಭರವಸೆ ನೀಡಿದರು.





ಗುರುಪೂರ್ಣಿಮಾ– 15 ಜುಲೈ 2011, ಶುಕ್ರವಾರ.

ಗುರುಗಳು ಮುಂಜಾನೆ ತುಂಬ ಬೇಗನೆ ಸಿದ್ಧರಾಗಿ ಮೊದಲು, ಆಶ್ರಮದಲ್ಲಿ ಪೂರ್ಣಗೊಂಡಿದ್ದ ಗ್ರಂಥಾಲಯ ಮತ್ತು ಸಭಾಗೃಹದ ಕಟ್ಟಡವನ್ನು ಉದ್ಘಾಟಿಸಿದರು. ನಂತರ ಅವರು ಧ್ಯಾನಮಂದಿರದತ್ತ ಮುಂದುವರಿದರು ಮತ್ತು ಪ್ರಾತಃಕಾಲದ ಸತ್ಸಂಗವನ್ನು ನಡೆಸಿಕೊಡಲು ಅವರು 7.00 ಗಂಟೆಗೆ ಅಲ್ಲಿದ್ದರು. ಧ್ಯಾನಮಂದಿರವು ತುಂಬಿತುಳುಕಿದ್ದು ಪಕ್ಕದ ತಂಗುಧಾಮಗಳ ತಾರಸಿಗಳ ಮೇಲೂ ಅಭ್ಯಾಸಿಗಳು ಸೇರಿದ್ದರು. ಸಾಯಂಕಾಲ ಧ್ಯಾನಮಂದಿರದಲ್ಲಿ ಸೋ.ಗಣೇಶ್‌ಮತ್ತು ಸೋ. ಕುಮರೇಶ್‌ರವರು ಪಿಟೀಲು ಕಚೇರಿಯೊಂದನ್ನು ನೀಡಿದರು. ಆರಂಭದಲ್ಲಿ ಗುರುಗಳು ಅದನ್ನು ಸೀಮಿತಮಂಡಲ ದೂರದರ್ಶನದಲ್ಲಿ ನೋಡಿದರೂ, ಕಾರ್ಯಕ್ರಮವು ರಸವತ್ತಾಗಿ ಕಳೆಗಟ್ಟಿದಾಗ ಅಭ್ಯಾಸಿಗಳು ಮತ್ತು ಸಂಗೀತಗಾರರಿಗೆ ಹರ್ಷವಾಗುವಂತೆ ಅವರು ಧ್ಯಾನಮಂದಿರಕ್ಕೆ ಆಗಮಿಸಿದರು. ಅದೊಂದು ಸ್ಮರಣೀಯ ರಾತ್ರಿ; ಪೌರ್ಣಮಿಯ ರಾತ್ರಿಯಲ್ಲಿ ಗುರುಗಳು ಅಭ್ಯಾಸಿಗಳ ಜೊತೆಯಲ್ಲಿ ಕಾರ್ಯಕ್ರಮವನ್ನು ಆಸ್ವಾದಿಸುತ್ತಿದ್ದರು, ಖಂಡಿತವಾಗಿಯೂ ಅದು ಆ ಶುಭದಿನಕ್ಕೊಂದು ಉಜ್ವಲ ಮುಕ್ತಾಯವಾಗಿತ್ತು.



ಸಂಪುಟ 4 ಸಂಚಿಕೆ 5 ಸೆಪ್ಟಂಬರ್ 2011
ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ ವಾರ್ತಾಪತ್ರ





### ತಿರುಪ್ಪೂರ, ಜುಲೈ 26–29, 2011

ಜನ್ಮದಿನೋತ್ಸವಾಚರಣೆ ಜುಲೈ 25ರಂದು ಕೊನೆಮುಟ್ಟಿತು ಮತ್ತು ಗುರುಗಳು ತಿರುಪ್ಪೂರದಲ್ಲಿ 29ರ ತನಕ ಉಳಿಯಲು ನಿರ್ಧರಿಸಿದರು. ತಾವು ಹೊರಡುವ ಮುನ್ನ ಗುರುಗಳನ್ನು ಭೇಟಿಯಾಗಲು ಅಭ್ಯಾಸಿಗಳು ಆಶಿಸಿದ್ದರು ಮತ್ತು ಅಂಥದೊಂದು ಬೃಹತ್ ಉತ್ಸವಾಚರಣೆಯ ನಂತರ ಗುರುಗಳು ದಣಿದಿದ್ದು ಅವರಿಗೆ ವಿಶ್ರಾಂತಿಯ ಅಗತ್ಯವಿದ್ದ ಕಾರಣ, ಅವರು ತಮಗೆ ದೈಹಿಕವಾಗಿ ಸಾಧ್ಯವಿದ್ದಷ್ಟು ಹೆಚ್ಚು ಮಂದಿಯನ್ನು ಭೇಟಿ ಮಾಡುವುದರಲ್ಲಿ ಸಮಯ ಕಳೆದರು. ಒಂದು ಬೀಸು ಹೇಳಿಕೆಯಲ್ಲಿ ಗುರುಗಳು, “ನಾನು ಭೇಟಿಯಾಗುತ್ತಿರುವ ಪ್ರತಿಯೊಬ್ಬರಿಗೂ ಮತ್ತು ಭೇಟಿಯಾಗದಿರುವ ಪ್ರತಿಯೊಬ್ಬರಿಗೂ ನಾನು ಈಗಾಗಲೇ ನನಗೆ ಸಾಧ್ಯವಿರುವ ಎಲ್ಲವನ್ನೂ ಕೊಟ್ಟಿರುವೆ.” ಎಂದರು.

ಅಭ್ಯಾಸಿಗಳ ಗುಂಪೊಂದಕ್ಕೆ ಗುರುಗಳು, “ಇಂಥ ಭಂಡಾರವೊಂದಕ್ಕೆ ನೀವು ಬರುವಾಗ, ದಯವಿಟ್ಟು ಸ್ವಲ್ಪ ಹೆಚ್ಚು ದಿನ ಉಳಿಯಿರಿ, ಹಿಂದಕ್ಕೆ ಧಾವಿಸಬೇಡಿ. ದಯವಿಟ್ಟು ವಿಲಂಬಿಸಿ, ವಿರಮಿಸಿ, ಧಾವಂತ ಪಡಬೇಡಿ ಮತ್ತು ಈ ವಾತಾವರಣದಲ್ಲಿ ನಿಮಗೆ ಸಾಧ್ಯವಿರುವಷ್ಟು ದೀರ್ಘಕಾಲ ಉಪಸ್ಥಿತರಿರಿ.” ಎಂದರು. ವಾತಾವರಣದ ಬಗ್ಗೆ ಮಾತನಾಡುತ್ತ ಅಭ್ಯಾಸಿಯೊಬ್ಬರು, ಟೆಂಟ್‌ಗಳನ್ನು ತೆಗೆಯುತ್ತಿರುವುದನ್ನು ನೋಡಲು ಬೇಸರ, ಮತ್ತು ಸ್ಥಳ ಬಿಕೋ ಎನಿಸುತ್ತಿದೆ ಎಂದರು. ಗುರುಗಳು, “ನನಗೆ 24ರ ಸಂಜೆ ಅಭ್ಯಾಸಿಗಳ ಮೊದಲ ಗುಂಪು ಹೊರಡಲಾರಂಭಿಸಿದಾಗಲೇ ಹೀಗನಿಸಲಾರಂಭಿಸಿದೆ.” ಎಂದರು.

ಅಭ್ಯಾಸಿಯೊಬ್ಬರು ಉತ್ಸವಕಾಲದಲ್ಲಿ ಕೆಲಸಮಾಡುವ ಸದವಕಾಶವನ್ನು ತನಗಿತ್ತುದಕ್ಕಾಗಿ ಗುರುಗಳಿಗೆ ಕೃತಜ್ಞತೆಯನ್ನು ಅರ್ಪಿಸಿದಾಗ ಅವರೆಂದರು, “ಕೆಲಸ ಮಾಡಲು ಇಚ್ಛಿಸುವಾತನತ್ತ ಕೆಲಸವೇ ದಾರಿ ಮಾಡಿಕೊಂಡು ಬರುತ್ತದೆ.”

### ಚೆನ್ನೈ– ಜುಲೈ 29, 2011ರಿಂದ ಅಗಸ್ಟ್ 15, 2011ರ ವರೆಗೆ

ಜುಲೈ 29ರಂದು ಗುರುಗಳು ಚೆನ್ನೈಗೆ ಆಗಮಿಸಿದರು ಮತ್ತು ನೇರವಾಗಿ ಮಣಪಾಕ್ಕಂ ಆಶ್ರಮಕ್ಕೆ ಹೋದರು. ಅವರು ಬಂದೊಡನೆಯೇ ಅವರ ನಿಯತ ಕಾರ್ಯಕ್ರಮವೂ ಪ್ರಾರಂಭವಾಯಿತು.

ಗುರುಗಳು ಒಂದು ಹೊಸ ಯೋಜನೆಯಲ್ಲಿ ತೊಡಗಿದ್ದಾರೆ, ಅದೇನೆಂದರೆ ಸಹಜಮಾರ್ಗದ ಇತಿಹಾಸದ ಬಗ್ಗೆ ಮಾತನಾಡುವುದು. ಅವರು ತಿರುಪ್ಪೂರದಲ್ಲಿ ನೀಡಿದ ಒಂದು ಹೇಳಿಕೆಯೇನೆಂದರೆ, “ಒಬ್ಬ ಬದುಕಿರುವಾಗ ನಾವು ವಿವರಗಳನ್ನು ತಿಳಿಯಬಯಸುವುದಿಲ್ಲ, ಮತ್ತು ಈಗಾಗಲೇ ತುಂಬಾ ವಿವರಗಳು ಶಾಶ್ವತವಾಗಿ ಕಳೆದುಹೋಗಿವೆ.” ಬೇರೆಬೇರೆ ದೇಶಗಳಲ್ಲಿ ಸಹಜಮಾರ್ಗದ ಇತಿಹಾಸವನ್ನು ಸಂಗ್ರಹಿಸಲು ಕೆಲ ಅಭ್ಯಾಸಿಗಳು ವಹಿಸಿದ ನೇತೃತ್ವವನ್ನು ಅವರು ಮೆಚ್ಚಿಕೊಂಡರು. ಯುರೋಪಿನಲ್ಲಿ ಸಹಜಮಾರ್ಗದ ಇತಿಹಾಸದ ಮೇಲೆ ಐರೋಪ್ಯರು ಗುರುಗಳ ಸಂದರ್ಶನ ಮಾಡಿದರು. ಗುರುಗಳು ಆಗಸ್ಟ್ 2ರಿಂದ 5ರವರೆಗೆ ಗಾಯತ್ರಿಯಲ್ಲಿ ಉಳಿದುಕೊಂಡು 6ರ ಪೂರ್ವಾಹ್ನ ಮಣಪಾಕ್ಕಂಗೆ ಹಿಂದಿರುಗಿದರು.

ಅಗಸ್ಟ್ 2ರಂದು ಗುರುಗಳು ಸುಮಾರು 150 ವಿದೇಶೀ ಅಭ್ಯಾಸಿಗಳನ್ನು ಗಾಯತ್ರಿಯಲ್ಲಿ ಊಟಕ್ಕೆ ಆಹ್ವಾನಿಸಿದ್ದರು. ಗುರುಗಳದು ಪರಿಪೂರ್ಣ ಅತಿಥೇಯ ಕುಟುಂಬವಾಗಿದ್ದು ಪ್ರತಿಯೊಬ್ಬರೂ ಊಟ ಮುಗಿಸಿದರೇ ಎಂಬುದನ್ನು ಅವರು ಖಾತ್ರಿಪಡಿಸಿಕೊಂಡರು. ಪ್ರತ್ಯೇಕವಾಗಿ ಗಮನಕ್ಕೆ ಬರುವ ಅಂಶವೆಂದರೆ, ಗುರುಗಳ ಮೇಲೆ ವಯಸ್ಸಿನ ಪರಿಣಾಮವನ್ನು ನೋಡಬಹುದಾಗಿದೆ. ಕುರ್ಚಿಯಲ್ಲಿ ಕುಳಿತುಕೊಳ್ಳುವುದು ಮತ್ತು ಮೇಲೇಳುವುದು ಅವರಿಗೆ ಕಷ್ಟವಾಗುತ್ತಿದೆ ಮತ್ತು ಅವರು ಇದನ್ನು ಅನುಭವಿಸುವುದನ್ನು ನೋಡಲು ತುಂಬ ಕಷ್ಟವೆನಿಸುತ್ತದೆ. ಒಮ್ಮೆ ಗುರುಗಳು ತನ್ನ ಕುರ್ಚಿಯಿಂದ ಮೇಲೇಳಲು ಕಷ್ಟ ಪಡುವಾಗ ಕೆಲ ಅಭ್ಯಾಸಿಗಳು ಅವರಿಗೆ ನೆರವೀಯಲು ಪ್ರಯತ್ನಿಸಿದರು. ಗುರುಗಳು ತನಗೆ ಸಹಾಯ ಬೇಕಿಲ್ಲವೆಂದರು; ಪ್ರಯತ್ನ ಪಟ್ಟು ಸ್ವತಃ ತಾವೇ ಎದ್ದುನಿಂತರು.

ಗುರುಗಳು ಆಗಸ್ಟ್ 6ರಂದು ಗುರುಗಳು ಮಣಪಾಕ್ಕಂಗೆ ಹಿಂದಿರುಗಿ ಬಂದಾಗ ಮುಂಬಯಿಯಿಂದ ಬಂದ ಅಭ್ಯಾಸಿಗಳ ಗುಂಪೊಂದು ಸಿದ್ಧಗೊಳ್ಳುತ್ತಿರುವ ನಿವೇಶನ ಯೋಜನೆಯೊಂದನ್ನು ಅವರಿಗೆ ವಿವರಿಸಿತು ಮತ್ತು ಗುರುಗಳು ಅದರ ವಿವರಗಳನ್ನು ತಿಳಿದುಕೊಳ್ಳಲು ಅತ್ಯಂತ ಉತ್ಸುಕರಾಗಿದ್ದರು. ಅಭ್ಯಾಸಿಯೊಬ್ಬರು, ಆ ಯೋಜನೆಯು ಅರ್ಧ–ಹಾದಿಯಲ್ಲಿದೆ, ಸಂಪೂರ್ಣವಾಗಿಲ್ಲ ಎಂದು ಹೇಳಿದಾಗ ಗುರುಗಳು, ಆನೆಯ ಸೊಂಡಿಲು ಕಾಣಿಸಿಕೊಂಡಾಗ ಅದರ ಬಾಲ ಖಂಡಿತವಾಗಿಯೂ ಬಂದೇ ಬರುತ್ತದೆ ಎನ್ನುವ ಹಿಂದಿ ಗಾದೆಯೊಂದನ್ನು ಉದ್ಗರಿಸಿದರು.

ಒಂದು ರಾತ್ರಿ ಊಟದ ನಂತರ ಸೋದರಿಯೊಬ್ಬರು ಗುರುಗಳಿಂದ ಸ್ವಲ್ಪ ಸಮಯವನ್ನು ಕೇಳಿದಾಗ, ಗುರುಗಳೆಂದರು, “ನೀವೇ ನೋಡುವಂತೆ ನಾನೀಗ ತುಂಬ ಬಳಲಿದ್ದೇನೆ, ನನಗೆ ಈಗ ಹೇಗೆನಿಸುತ್ತಿದೆ ಎಂಬುದನ್ನು ನೀವು ನೋಡಬೇಕು ಮತ್ತೆ ನಿಮ್ಮ ಬೇಡಿಕೆಗಳನ್ನು ಮಂಡಿಸಬೇಕು.” ಎಂದರು. ಎಲ್ಲರಿಗೂ ಅದು ಒಂದು ಪಾಠವಾಗಿತ್ತು.

ಆಸಕ್ತಿ ವಹಿಸುವ ಬಗ್ಗೆ ಗುರುಗಳು ಮಾತನಾಡುತ್ತಾ, “ಯಾವುದೇ ಕ್ಷೇತ್ರದಲ್ಲೂ, ಪ್ರಥಮ ಹೆಜ್ಜೆಯೆಂದರೆ ಆಸಕ್ತಿ ವಹಿಸಿಕೊಳ್ಳುವುದು, ಸಹಜಮಾರ್ಗಕ್ಕೂ ಇದನ್ನೇ ಬಾಬೂಜಿಯವರು ಹೇಳಿದ್ದಾರೆ, ಅಂದರೆ ಆಸಕ್ತಿ ವಹಿಸುವುದು” ಎಂದರು. ಅವರು ಹೇಳಿದರು, ಆಸಕ್ತಿ ವಹಿಸುವುದು ನಮಗೆ ಬಿಟ್ಟದ್ದು, ನಾವು ಅದನ್ನು ನಮ್ಮದೇ ಒಂದು ಅಂಗವನ್ನಾಗಿ ಮಾಡಿಕೊಳ್ಳಬೇಕು, ಅರ್ಥಾತ್, ಸದ್ಗುರು, ಸಂಸ್ಥೆ, ಮತ್ತು ಸಾಧನಪದ್ಧತಿಯನ್ನು ನಮ್ಮ ಸ್ವಂತದ್ದನ್ನಾಗಿ ಮಾಡಿಕೊಳ್ಳುವುದು.

ಮಣಪಾಕ್ಕಂ ಆಶ್ರಮದಲ್ಲಿ ಆಗಸ್ಟ್ 13ರಿಂದ 15ರ ವರೆಗೆ ನಡೆಯುತ್ತಿದ್ದ ಕೇಂದ್ರ ಸಂಚಾಲಕರು/ವಲಯ ಸಂಚಾಲಕರುಗಳ ಸಭೆಯನ್ನು ಗುರುಗಳು ತಮ್ಮ ಸಾನ್ನಿಧ್ಯದಿಂದ ಪಾವನಗೊಳಿಸಿದರು. ಅದರ ಉದ್ಘಾಟನಾ ಮತ್ತು ಮುಕ್ತಾಯ ಸಮಾರಂಭಗಳಲ್ಲಿ ಮಾತನಾಡಿದರು.

ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಮಣಪಾಕ್ಕಂ ಆಶ್ರಮದ ಧ್ಯಾನಮಂದಿರದ ಮುಂಭಾಗದಲ್ಲಿ ಸುಮಾರು 150 ಮಂದಿ ಅಭ್ಯಾಸಿಗಳು ಮತ್ತು ಮಕ್ಕಳ ಉಪಸ್ಥಿತಿಯಲ್ಲಿ ಸೋ. ಎ. ಪಿ. ದುರೈಯವರು ಧ್ವಜಾರೋಹಣ ಗೈದರು. 16ರಂದು ಗುರುಗಳು ಮಿಷನ್‌ನ ಜಾಗ ನೋಂದಣಿಗಾಗಿ ದೆಹಲಿಗೆ ಹೊರಟರು. ಆನಂತರ 18ರಂದು ಅವರು ಹೈದರಾಬಾದ್‌ಗೆ, ಮತ್ತೆ ಹೊಸ ಯೋಜನಾ ನಿವೇಶನದ ಸ್ಥಳ ನೋಂದಣಿಗಾಗಿ ಹೊರಟರು.

ಸಂಪುಟ 4 ಸಂಚಿಕೆ 5 ಸೆಪ್ಟಂಬರ್ 2011
ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ ವಾರ್ತಾಪತ್ರ





ZiC/CiC Workshop

## ದಕ್ಷಿಣ ವಲಯದ ಕೇಂದ್ರ ಹಾಗೂ ವಲಯ ಮುಖ್ಯಸ್ಥರಿಗಾಗಿ ಕಮ್ಮಟ, ಚೆನ್ನೈ, ಆಗಸ್ಟ್ 13–15, 2011

ಮಣಪ್ಪಾಕ್ಕಂನಲ್ಲಿ ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ಕೇಂದ್ರ ಹಾಗೂ ವಲಯ ಮುಖ್ಯಸ್ಥರಿಗಾಗಿ ಕಮ್ಮಟವೊಂದನ್ನು ಆಗಸ್ಟ್ 13ರಿಂದ 15ರವರೆಗೆ ಆಯೋಜಿಸಲಾಗಿತ್ತು. ಸಭೆಯು ಗುರುಗಳು ನೀಡಿದ ಬೈಠಕಿನಿಂದ ಆರಂಭವಾದ ನಂತರ ಅವರು ಮಾತನಾಡಿದರು. ಗುರುಗಳು ತಮ್ಮ ಉಪನ್ಯಾಸದಲ್ಲಿ ಪ್ರಶಿಕ್ಷಕರೆಂದರೆ ಮಿಷನ್ನಿನ ಧಮನಿಗಳಿದ್ದಂತೆ, ಅವರು ಗುರುಗಳ ಕೆಲಸವನ್ನು ಮುಂದುವರೆಸುತ್ತಾರೆ ಎಂದು ಹೇಳಿದರು. ಬಾಬೂಜಿಯವರು ದಕ್ಷಿಣಕ್ಕೆ ಬಂದು ಪ್ರಾಣಾಹುತಿ ನೀಡಿದ್ದರ ಫಲವು ಇಪ್ಪತ್ತು ವರ್ಷಗಳ ನಂತರ ಕಾಣುತ್ತಿದೆ ಎಂದರು. ಪ್ರಶಿಕ್ಷಕರು ತಮ್ಮ ಕೆಲಸವನ್ನು ಗಂಭೀರವಾಗಿ ಪರಿಗಣಿಸಿ ಸಮರ್ಪಣಾ ಭಾವದಿಂದ ಸೇವೆ ಸಲ್ಲಿಸಬೇಕು, ಹಾಗೆ ಸೇವೆ ನೀಡಿದಾಗಲೇ ಅವರು ಗುರುಗಳ ಎತ್ತರಕ್ಕೇರಲು ಅವಕಾಶವಿರುವುದು ಎಂದು ಅವರು ಹೇಳಿದರು.

ನಂತರ ಸೋ.ಪಿ.ಆರ್.ಕೃಷ್ಣರವರು ತಮ್ಮ ಉಪನ್ಯಾಸದಲ್ಲಿ ಜಾಗತಿಕ ಸೇವಾ ತಂಡವನ್ನು (GST) ಪರಿಚಯಿಸಿದರು. ಪ್ರಶಿಕ್ಷಕರು ಆಧ್ಯಾತ್ಮಿಕ ಕಾರ್ಯಕ್ಕೆ ಪ್ರಾಥಮಿಕ ಪ್ರಾಶಸ್ತ್ಯ ನೀಡಿ ಆಡಳಿತಾತ್ಮಕ ಕೆಲಸಗಳನ್ನು ಸ್ವಯಂಸೇವಕರಿಗೆ ನೀಡಬೇಕು ಎಂದರು. GST ಯ ಸದಸ್ಯರು ತಮ್ಮ ಪ್ರಮುಖ ಕರ್ತವ್ಯಗಳನ್ನು ಪ್ರಸ್ತುತ ಪಡಿಸಿದ ನಂತರ ಪ್ರಶ್ನೋತ್ತರವಿದ್ದಿತು. ಕಾರ್ಯಕ್ರಮ ಅಭಿವೃದ್ಧಿ, ತರಬೇತಿ ಪ್ರದಾನ, ಸಮಾಜ ನಿರ್ಮಾಣ, ಸದಸ್ಯ ಸೇವೆಗಳು, ಸ್ಥಿರಾಸ್ತಿ, ಕಾರ್ಯಾಚರಣೆ ಮತ್ತು ಸತತ ಪ್ರಗತಿಯಂತಹ ಅನೇಕ ತಂಡಗಳಿದ್ದವು. ಕೇಂದ್ರ ಹಾಗೂ ವಲಯ ಮುಖ್ಯಸ್ಥರು ಈ ಸೇವೆಗಳನ್ನು ತಂತಮ್ಮ ಕೇಂದ್ರಗಳಲ್ಲಿ ಅಳವಡಿಸಿಕೊಳ್ಳುವ ವಿಧಾನದ ನೀಲನಕ್ಷೆಯನ್ನು ತಯಾರಿಸಿದರು.

ಕೊನೆಯ ದಿನದಂದು ಸೋ. ರಾಜಗೋಪಾಲನ್‌ರವರು ಪ್ರಶಿಕ್ಷಕರ ಕಾರ್ಯವಿಧಿಯನ್ನು ಪುನಃ ಪರಿಚಯಿಸಿದರು. ಎಲ್ಲಾ ವಲಯ ಹಾಗೂ ಪ್ರಮುಖ ಕೇಂದ್ರಗಳಿಗೆ ಅವರ ಮುಂದಿನ ಒಂದು ವರ್ಷದ ಕಾರ್ಯ ಯೋಜನೆಯನ್ನು ಪ್ರಸ್ತುತಪಡಿಸಲು ಕೇಳಲಾಯಿತು. ಗುರುಗಳು ಮುಕ್ತಾಯ ಉಪನ್ಯಾಸದಲ್ಲಿ ನಾವು ಮೊದಲು ಉತ್ತಮ ಮಾನವರಾಗಿ ಬದಲಾಗಬೇಕು ಎಂದರು. ನೀವೆಲ್ಲಾ GST ಆಗಿರಲು ನಾನು ISI (Individual Serving Individual) ಆಗಿರುವೆ. ಮಾನವರಾಗಿ, ಎದುರಿನ ವ್ಯಕ್ತಿಗೆ ಪ್ರೇಮ ಮತ್ತು ಹೃದಯಪೂರ್ವಕವಾಗಿ ಸೇವೆ ಸಲ್ಲಿಸಿ. ನೀವು ಶುದ್ಧವಾಗಿದ್ದಾಗ ಮಾತ್ರ ಅವರಿಗೆ ಉತ್ತಮ ಸೇವೆ ನೀಡಲು ಸಾಧ್ಯ. ನೀವು ಅಭ್ಯಾಸಿಯ ಕಾಳಜಿ ವಹಿಸಿ, ಗುರುಗಳು ನಿಮ್ಮ ಕಾಳಜಿ ವಹಿಸುತ್ತಾರೆ ಎಂದರು.

## ಆಫ್ರಿಕಾದ ಅಭ್ಯಾಸಿಗಳ ಸಭೆ

ಆಫ್ರಿಕಾದ ವಿವಿಧ ದೇಶಗಳಿಂದ ಸುಮಾರು 60 ಅಭ್ಯಾಸಿಗಳಿಗಾಗಿ ಸಭೆಯನ್ನು ಜುಲೈ 16ರಿಂದ 22ರವರೆಗೆ ಮಣಪ್ಪಾಕ್ಕಂನಲ್ಲಿ ನಂತರ ತಿರುಪ್ಪೂರಿನಲ್ಲಿ ನಡೆಸಲಾಯಿತು. ಆಫ್ರಿಕಾದ ಸಹೋದರ ಸಹೋದರಿಯರ ಅಗತ್ಯಗಳಿಗನುಸಾರ ವಾರಪೂರ್ತಿ ಉಪನ್ಯಾಸಗಳು, ಬೈಠಕುಗಳು, ಸತ್ಸಂಗ ಮತ್ತು ಕಮ್ಮಟಗಳಿಂದ ಕೂಡಿದ ತರಬೇತಿಯಾಗಿತ್ತು. ಬಹಳಷ್ಟು ಪ್ರತಿನಿಧಿಗಳು ಭಾರತ ಸಂದರ್ಶಿಸಲು ಮತ್ತು ಮೊದಲ ಬಾರಿ ಗುರುಗಳನ್ನು ಭೇಟಿಯಾಗಲು ತಿಂಗಳುಗಳ ಕಾಲ ಹಣ ಒಟ್ಟುಗೂಡಿಸಿ ಬಂದಿದ್ದರು. 16ರಂದು ಗುರುಗಳು ಉಪನ್ಯಾಸ ನೀಡಿ ಸತ್ಸಂಗವನ್ನು ನಡೆಸಿದರು. ಆಫ್ರಿಕಾದವರಿಗೆ ಉದ್ದೇಶಿಸಿದ್ದರೂ ಮಾನವಕುಲಕ್ಕೇ ತಾಗುವಂತಹ ಗಂಭೀರ ಉಪನ್ಯಾಸದಿಂದ ಎಲ್ಲರೂ ಪ್ರೇರಿತರಾದರು.

ಅವರು ರಾಷ್ಟ್ರಗಳು 'ಕಪ್ಪು' ಇರುವುದಿಲ್ಲ, ಮಾನವ ಹೃದಯಗಳು ಇರುತ್ತವೆ; ಪಂಗಡಗಳ ಕಂದಾಚಾರಗಳು, ಮೂಢನಂಬಿಕೆಗಳನ್ನು ಬುಡಸಮೇತ ತೊಲಗಿಸಬೇಕೆಂದು ಹೇಳಿದರು. ಉಪಸ್ಥಿತರು ಈ ಸವಾಲನ್ನು ಧೈರ್ಯದಿಂದ ಸ್ವೀಕರಿಸಿ ಜನರ ಹೃದಯಗಳನ್ನು ಬೆಳಗುವಂತೆ ಕೆಲಸ ಮಾಡಲು ಅವರು ಪ್ರೇರೇಪಿಸಿದರು. ಯಾವುದೇ ಬದಲಾವಣೆಯನ್ನು ತರಲು, ಜಗವನ್ನು–ಮಾನವಕುಲವನ್ನು ಏಕೀಕೃತಗೊಳಿಸಲು ಜನರಲ್ಲಿ ಪರಿವರ್ತನೆ ತಂದರೆ ಮಾತ್ರ ಸಾಧ್ಯ.

ಸೋ. ಕೃಷ್ಣರವರು 'ವಿವಿಧತೆಯಲ್ಲಿ ಏಕತೆ' ಕುರಿತ ಉಪನ್ಯಾಸ, ಸೋ. ರಾಜಗೋಪಾಲನ್‌ರವರು ಬಿಂಬಿಸಿದ ಸಹಜಮಾರ್ಗದ ಅನನ್ಯತೆ ಹಾಗೂ ಸೋ. ಎ.ಪಿ.ದೊರೈರವರ ಪಾತ್ರ ಮತ್ತು ಜವಾಬ್ದಾರಿ ಕುರಿತ ಉಪನ್ಯಾಸಗಳು ಪ್ರಭಾವಶಾಲಿಯಾಗಿದ್ದವು.

ಬಹುತೇಕ ಭಾಗಿಗಳು ಮಣಪ್ಪಾಕ್ಕಂನಿಂದ ತಿರುಪ್ಪೂರಿಗೆ ಬಸ್‌ಪ್ರಯಾಣ ಮಾಡಿದರು. ಗುರುಗಳ ಸಲಹಾಪ್ರಕಾರ ಅವರು ನಾಟ್ರಂಪಲ್ಲಿಯಲ್ಲಿ ಮಧ್ಯಾಹ್ನದ ಭೋಜನಕ್ಕಾಗಿ ಮತ್ತು ಕೃಷ್ಣಗಿರಿ ಆಶ್ರಮದಲ್ಲಿ ಲಘುಉಪಹಾರಕ್ಕಾಗಿ ನಿಂತರು. ಸೋದರ ಸೋದರಿಯರನ್ನು ಪ್ರೇಮಾದರಗಳಿಂದ ಉಪಚರಿಸಲಾಯಿತು. ಈ ಆಶ್ರಮಗಳನ್ನು ಕಾಣುವ ಅವಕಾಶವು ಸಕಲರಿಗೂ ಅನುಭವ ದೊರಕಿಸಿತು.



ಸಂಪುಟ 4 ಸಂಚಿಕೆ 5 ಸೆಪ್ಟಂಬರ್ 2011
ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ ವಾರ್ತಾಪತ್ರ



ತಿರುಪ್ಪೂರಿನಲ್ಲಿ ಸೋ.ಜೇಮ್ಸ್ ಮತ್ತು ಸೋ. ಮೈಕೆಲ್‌ರವರು ಉಪನ್ಯಾಸ ನೀಡಿದರು. ಗುರುಗಳು ಮುಕ್ತಾಯ ಭಾಷಣದಲ್ಲಿ ಹೇಳಿದರು, “ನಮ್ಮಲ್ಲಿ ವಿವಿಧ ಭಾಷೆಗಳಿವೆ. ಆದರೆ ನಮ್ಮ ನಡುವೆ ಪ್ರೇಮವಿದ್ದಲ್ಲಿ ಭಾಷೆಯು ಅಡ್ಡಿಯಾಗದು. ಕಣ್ಣುಗಳು ಮಾತನಾಡುವವು, ಅಲ್ಲವೇ?...ನಾವು ಮಾನವರಾಗೋಣ ಹಾಗೂ ದೇವರು ನೀಡಿರುವ ಮಾನವೀಯತೆ ಎಂಬುದನ್ನು ಆನಂದಿಸೋಣ. ಮಾನವೀಯತೆ ಎಂದರೆ ಪರಸ್ಪರ ಪ್ರೇಮ, ಹಂಚಿಕೊಳ್ಳುವಿಕೆ, ಕಾಳಜಿ. ಎಲ್ಲಕ್ಕಿಂತ ಮಿಗಿಲಾಗಿ ಇದು ಕೇಕ್ ಕತ್ತರಿಸಿದಂತಲ್ಲ, ಅಂದರೆ ಮಾನವೀಯತೆಯೆಂಬ ಕೇಕ್. ಭಗವಂತನು ತನ್ನ ಭಾಷೆಯಲ್ಲಿ ಮಾತನಾಡುತ್ತಾನೆಂದು ನೆನೆಪಿನಲ್ಲಿಟ್ಟುಕೊಂಡು ಬರಿಯ ಪಠ್ಯದಂತೆ ತಿಳಿಯದೆ ಇದನ್ನು ಸಾಧಿಸಬೇಕು,. ಅವನ ಭಾಷೆಯೇನು? ಮೌನ. ಹೃದಯದಿಂದ ಹೃದಯಕ್ಕೆ, ಮನಸಿನಿಂದ ಮನಸಿಗಲ್ಲ.”

ಪ್ರತಿಯೊಬ್ಬ ಅಭ್ಯಾಸಿಯೂ ವಾಪಸಾಗುವಾಗ ಗುರುಗಳು ನೀಡಿದ ಸಂದೇಶವು ತಮ್ಮ ಹೃದಯದಾಳಕ್ಕಿಳಿದು ಬೆಳಗಿ ಜಗಕ್ಕೆಲ್ಲ ಬೆಳಕು ನೀಡುವುದೆಂಬ ಬದ್ಧತೆಯನ್ನು ಹೃದಯದಲ್ಲಿ ತುಂಬಿಕೊಂಡು ತೆರಳಿದರು.

## ಗುರುಗಳ ಹುಟ್ಟುಹಬ್ಬ ಆಚರಣೆ

### ಭಾರತದ ಕೇಂದ್ರಗಳು

ಕೊಲ್ಕಾತಾದಲ್ಲಿ ಮಕ್ಕಳೂ ಸೇರಿದಂತೆ ಸುಮಾರು 275 ಅಭ್ಯಾಸಿಗಳು ಹಾಜರಿದ್ದರು. ಪ್ರೇಮಪೂರಿತ ಭಜನೆಗಳನ್ನು ಹಾಡಲಾಯಿತು. ಉಪಾಹಾರದ ನಂತರ ಶಿಸ್ತಿನ ಕುರಿತು ಗುರುಗಳು ಹಿಂದಿಯಲ್ಲಿನೀಡಿದ ಉಪನ್ಯಾಸವನ್ನು ಕೇಳಿಸಲಾಯಿತು, ತದನಂತರ ಗುರುಗಳ ವಿದೇಶ ಪ್ರಯಾಣದ ಭಾವಚಿತ್ರಗಳನ್ನು ಪ್ರದರ್ಶಿಸಲಾಯಿತು. ಸಾಧನೆಯ ವಿವಿಧ ಅಂಶಗಳ ಕುರಿತು ಕೇಳಲಾದ ಪ್ರಶ್ನೆಗಳನ್ನು ಹೊಸ ಅಭ್ಯಾಸಿಗಳೂ ಸಹ ಉತ್ಸುಕತೆಯಿಂದ ಉತ್ತರಿಸಿದರು. ಗುರುಗಳ ಜೀವನಾಧಾರಿತ 'ನೆನಪಿನ ಓಣಿಯಲ್ಲಿ' ಕುರಿತು ರಸಪ್ರಶ್ನೆಯನ್ನು ಏರ್ಪಡಿಸಲಾಗಿತ್ತು. ಭೋಜನಾನಂತರದ ವೇಳೆಯಲ್ಲಿ ಸಂಜೆಯ ಸತ್ಸಂಗದ ತನಕ ಅಭ್ಯಾಸಿಗಳು ಆಧ್ಯಾತ್ಮಿಕ ಪರಿಸರದಲ್ಲಿ ಮಗ್ನಗೊಂಡು ಮೌನವಾಗಿ ಆತ್ಮಾವಲೋಕನದಲ್ಲಿ ತೊಡಗಿಸಿಕೊಂಡರು.

ಜೋಧ್ಪುರದಲ್ಲಿ ಮಕ್ಕಳನ್ನೊಳಗೊಂಡಂತೆ 190 ಅಭ್ಯಾಸಿಗಳು ಮೂರುದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಧ್ಯಾನಮಂದಿರವನ್ನು ಸ್ವಚ್ಛಗೊಳಿಸಿ ಸೌಮ್ಯವಾಗಿ ಅಲಂಕೃತಗೊಳಿಸಲಾಗಿತ್ತು. ಪ್ರೇಮ ಮತ್ತು ಭಕ್ತಿಪೂರಿತ ಭಜನೆಗಳನ್ನು ಹಾಡಲಾಯಿತು. ಸಾಧನೆಯ ಅನೇಕ ಅಂಶಗಳಾಧಾರಿತ ಕಿರುನಾಟಕವನ್ನು ಪ್ರಸ್ತುತಪಡಿಸಲಾಯಿತು. ಎಲ್ಲಾ ಅಭ್ಯಾಸಿಗಳೂ ನಿಜಜೀವನ ಸಂದರ್ಭಗಳಲ್ಲಿ ಗುರುಗಳ ಪಾತ್ರದಿಂದ ತಮ್ಮ ಜೀವನವು ಹೇಗೆ ಪರಿವರ್ತನೆಯಾಗಿದೆ ಎಂಬುದನ್ನು ಹೇಳುತ್ತಾ ಕೃತಜ್ಞತೆ ವ್ಯಕ್ತ ಪಡಿಸಿದರು. ಎಲ್ಲಾ ಅಭ್ಯಾಸಿಗಳೂ ಗುರುಗಳಿಗೆ ಭಕ್ತಿ, ಶ್ರದ್ಧೆ ಮತ್ತು ಸಮರ್ಪಣೆ ತೋರಿದರೆ ಜೀವನದ ಯಾವುದೇ ಕಠಿಣ ಸನ್ನಿವೇಶಗಳನ್ನೆದುರಿಸಬಹುದೆಂಬ ಸಂದೇಶದೊಡನೆ ಪುನರುತ್ಸಾಹ ಪಡೆದು ಹಿಂತಿರುಗಿದರು.

ಭಿಲ್ವಾರದಲ್ಲಿ 'ಪ್ರೇಮದಲ್ಲಿ ಶಿಸ್ತು' ವಿಷಯಾಧಾರಿತ ಭಿತ್ತಿಚಿತ್ರಗಳಲ್ಲಿ ಗುರುಗಳ ಸಂದೇಶಗಳನ್ನು ಮುದ್ರಿಸಲಾಗಿತ್ತು. ಮುಂಜಾನೆಯ ಸತ್ಸಂಗದ ನಂತರ ಭಜನೆಗಳು, ನಾಟಕ ಮತ್ತು ಡಿವಿಡಿ ಪ್ರದರ್ಶನಗಳು ನಡೆದವು.

ಜೈಪುರದಲ್ಲಿ ಸಾಧನೆಯ ವಿವಿಧ ಅಂಶಗಳಾಧಾರಿತ ಚರ್ಚೆಗಳು ಮತ್ತು ಉಪನ್ಯಾಸಗಳು ನಡೆದವು. ನಂತರ ಮಕ್ಕಳು ಪ್ರದರ್ಶಿಸಿದ ಸಾಂಸ್ಕೃತಿಕ ಕಾರ್ಯಕ್ರಮವು ಎಲ್ಲರ ಹೃದಯ ತಟ್ಟಿತು. ಮೂರು ದಿನಗಳ ಕಾರ್ಯಕ್ರಮದಲ್ಲಿ ಮಕ್ಕಳೂ ಸೇರಿದಂತೆ ಸುಮಾರು 300 ಅಭ್ಯಾಸಿಗಳು ಪಾಲ್ಗೊಂಡಿದ್ದರು.



ಜೋಧ್ಪುರ



ಜೈಪುರ

ಸಂಪುಟ 4 ಸಂಚಿಕೆ 5 ಸೆಪ್ಟಂಬರ್ 2011
ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ ವಾರ್ತಾಪತ್ರ



## ಸೇವೆಯ ಪ್ರಾಮುಖ್ಯತೆ

"ಗುರುಗಳನ್ನು ಪ್ರೀತಿಸುವುದು ಅಸಾಧ್ಯವಲ್ಲದಿದ್ದರೂ ಕಷ್ಟ" ಎಂದು ಪೂಜ್ಯ ಗುರುಗಳು ಸಂಸ್ಥೆಯ ಕಾರ್ಯಾಧಿಕಾರಿಗಳನ್ನು ಕುರಿತು ಜನವರಿ 10ನೇ ತಾರೀಖಿನಂದು ಮಾಡಿದ ಭಾಷಣದಲ್ಲಿ ಹೇಳಿದ್ದಾರೆ. ಅವರು ಅನೇಕ ವರ್ಷಗಳ ಹಿಂದೆ ತಮ್ಮ ಗುರುಗಳಾದ ಬಾಬೂಜಿ ಮಹಾರಾಜರುತಮಗೆ ಕಲಿಸಿಕೊಟ್ಟ ವಿಷಯ – ಪ್ರೇಮ ಎಂಬುದರ ಬಗ್ಗೆ ನಮಗೆ ಏನೂ ತಿಳಿದಿಲ್ಲ ಎಂಬುದನ್ನೇ ಪುನಃ ತಿಳಿಹೇಳಿದರು. ಕೇವಲ ಸೇವೆಯ ಮೂಲಕ ಓರ್ವನು ಪ್ರೇಮವನ್ನು ಬೆಳೆಸಿಕೊಳ್ಳಬಹುದು.

## ಸ್ವ೦ಯಂ ಸೇವಕರದಾಖಲಾತಿಗಾಗಿದ್ದ ಸ್ಥಳ

ಸ್ವಯಂ ಸೇವಕರ ದಾಖಲಾತಿಗಾಗಿರುವ ಸ್ಥಳದಲ್ಲಿ ಒಂದೇ ಸಮನೆ ಹುರುಪಿನಿಂದ ಬರುತಿದ್ದ ಸ್ವಯಂಸೇವಕರ ಒಳಹರಿವನ್ನು ನೋಡಬಹುದಾಗಿತ್ತು ಮತ್ತು ಹೆಚ್ಚು ಕಡಿಮೆಎಲ್ಲಾ ಕಾರ್ಯ ವಿಭಾಗಗಳಾದ ಸುರಕ್ಷೆ, ಅಡಿಗೆಮನೆ, ಊಟದಮನೆ, ಕ್ಯಾಂಟೀನ್, ಧ್ಯಾನಮಂದಿರ, ಆರೋಗ್ಯಕೇಂದ್ರ ನಿರ್ಮಲೀಕರಣ, ವಾಹನಸಾಗಾಣಿಕೆ ಮತ್ತು ಸ್ವಚ್ಛತೆ ಮುಂತಾದವುಗಳಿಗೆ ಮಾನವಶಕ್ತಿಯ ಕೊರತೆಯೇ ಇರಲಿಲ್ಲ. ತಿರುಪ್ಪೂರು ಹಾಗೂ ಅದರ ಸುತ್ತಮುತ್ತಇರುವ ಕೇಂದ್ರಗಳ ಅಭ್ಯಾಸಿಗಳು ಕರುಣೆಯಿಂದ, ಮನಃಪೂರ್ವಕವಾಗಿ ಕೆಲಸವಮಾಡಿ, ಅಭ್ಯಾಸಿಗಳಿಗೆ ಅವರಿರುವಷ್ಟುಕಾಲವೂ ನಿರಾಂತಕವಾಗಿ ಇರಲು ಅನುವುಮಾಡಿಕೊಟ್ಟರು.

## ಉತ್ಸವದೆಡೆಗಿನ ಭರಾಟೆಯ ಓಟ :

ಭಾರತದ ವಿವಿಧ ಪ್ರಾಂತ್ಯಗಳ ನಿವಾಸಿಗಳು ಉತ್ಸವದ ಎರಡು ತಿಂಗಳ ಮೊದಲೇ, ಈ ಉತ್ಸವದ ಎರಡು ತಿಂಗಳ ಮೊದಲೇ, ಈ ಉತ್ಸವ ನಡೆಯಬೇಕಾದ ಸ್ಥಳಕ್ಕೆ ಸ್ವಯಂಸೇವೆ ಮಾಡಲು ಬಂದು, ಆ ಪ್ರದೇಶವನ್ನು ಉತ್ಸವಕ್ಕಾಗಿ ತಯಾರು ಮಾಡುವ ಕಾರ್ಯದಲ್ಲಿ ಹುಮ್ಮಸ್ಸಿನಿಂದ ಭಾಗಿಯಾಗುತ್ತಿರುವುದನ್ನು ನೋಡಬಹುದಾಗಿತ್ತು.

- ಜೂನ್ ತಿಂಗಳ ಮೊದಲನೇ ವಾರದಲ್ಲಿ ಕೇರಳದ ಅಭ್ಯಾಸಿಗಳು ಬಂದು ಸೇರಿ, ಅಲ್ಲಿ ಬೆಳೆದಿದ್ದ ಕಳೆ, ಪೊದೆ, ಮುಂತಾದವುಗಳನೆಲ್ಲಾ ಕಿತ್ತುಹಾಕಿ, ಆ ಸ್ಥಳವನ್ನು ಸರಿಸುಮಾರಾಗಿ ಶುದ್ಧಗೊಳಿಸಿದರು. ಹಾಗೆಯೇ ಗುರುಗಳ ಕುಟೀರದ ಮುಂದೆ ಇಟ್ಟಿಗೆ ಮತ್ತುಇತರ ಕಟ್ಟಡದ ಸಾಮಗ್ರಿಗಳನ್ನು ಹೊತ್ತುಒಂದು ಮಳೆನೀರಿನ ಹರಿವಿಗಾಗಿ ಕಾಲುವೆಯನ್ನು ಕಟ್ಟಿದರು. ಅವರುಅಡಿಗೆಮನೆ ಮತ್ತು ಶೌಚಾಲಯಗಳನ್ನು ಶುದ್ಧಪಡಿಸಲು ಕೂಡಾ ಸಹಾ೦ಯ ಮಾಡಿದರು.
- ಜುಲೈ ತಿಂಗಳ ಮೊದಲ ವಾರದಲ್ಲಿಗುಜರಾತ್‌ನಿಂದ ಬಂದು ಸೇರಿದ ಸ್ವಯಂ ಸೇವಕರು ಸಹಾ ಈ ಕೆಲಸಗಳಲ್ಲಿ ಪಾಲ್ಗೊಂಡರು. ವಾತಾವರಣದಲ್ಲಿಆಗುತ್ತಿರುವ ಬದಲಾವಣೆಯು ಪ್ರತ್ಯಕ್ಷವಾಗಿ ಕಣ್ಣಿಗೆ ಕಾಣುತ್ತಿತ್ತು ಮತ್ತು ಸ್ವಯಂ ಸೇವಕರಲ್ಲಿಯೂ ಸಹಾ ಆಂತರಿಕ ಪರಿವರ್ತನೆ ಆಗುತ್ತಿತ್ತು.



- ಆಂದ್ರ ಪ್ರದೇಶದ ಸ್ವಯಂ ಸೇವಕರು ಗುರುಪೂರ್ಣಿಮೆಗೆ ಮೊದಲೇ ಇಲ್ಲಿಗೆ ಬಂದು ತಲುಪಿದರು. ಎಲ್ಲರೂ ತಮ್ಮ ಕೆಲಸಗಳಲ್ಲಿ ಎಷ್ಟರಮಟ್ಟಿಗೆ ನಿರತರಾಗಿದ್ದರೆಂದರೆ ಕೆಲವರಿಗೆ ಉತ್ಸವದ ಸಮಯದಲ್ಲಿ ಗುರುಗಳ ಕ್ಷಣಮಾತ್ರದರ್ಶನಕ್ಕಾಗಿಯೂ ಸಹ ಧ್ಯಾನಮಂದಿರಕ್ಕೆ ಬರಲಾಗಲಿಲ್ಲ.
- ತಮಿಳುನಾಡಿನ ತಿರುವಣ್ಣಾಮಲೈ, ವೆಲ್ಲೂರು, ಈರೋಡ್ ಮತ್ತುತಿರುಪ್ಪೂರಿನ ಸ್ವಯಂಸೇವಕರು ಕಲ್ಲುಗಳನೆಲ್ಲ ಕಿತ್ತಿಹಾಕಿ ಧ್ಯಾನ ಮಂದಿರದಲ್ಲಿ ಜಮಖಾನೆಗಳನ್ನು ಹಾಸುವ ಮೂಲಕ ತಮ್ಮ ಕಾರ್ಯವನ್ನು ಮುಂದುವರೆಸಿದರು. ಹಾಗೆಯೇ ವೇದಿಕೆಯ ಬಳಿಯ ಪೊದೆಗಳನ್ನೆಲ್ಲ ತೆಗೆದುಹಾಕಿ ಆ ಸ್ಥಳವನ್ನು ಶುಚಿಗೊಳಿಸಿದರು. ಅಲ್ಲಿ ನಿರ್ಮಾಣಗೊಂಡ ಕೇವಲ ನಿಶ್ಶಬ್ದತೆ ಮತ್ತುಆಧ್ಯಾತ್ಮಿಕ ಸ್ಥಿತಿಯ ಅನುಭವವು ಅವಿಸ್ಮರಣೀಯ.
- ಕರ್ನಾಟಕದ ಸ್ವಯಂಸೇವಕರು ಒಂದು ತಿಂಗಳ ಮುಂಚಿನಿಂದಲೂ ವಾರಾಂತ್ಯದ ದಿನಗಳಲ್ಲಿ ತಿರುಪ್ಪೂರಿಗೆ ಬಂದು ಹೋಗುವುದನ್ನು ಮುಖ್ಯವಾಗಿ ಪರಿಗಣಿಸಿ ವಾಹನದ ಏರ್ಪಾಡು ಮಾಡಿಕೊಂಡಿದ್ದರು. ಉತ್ಸವದ ಸಮಯದಲ್ಲಿ ನಾವು ಅವರನ್ನು ಭೋಜನಾ ಸ್ಥಳ, ಸುರಕ್ಷೆ, ಮಕ್ಕಳ ಕೇಂದ್ರ, ನೊಂದಾವಣೆ, ಧ್ಯಾನ ಮಂದಿರ ಮುಂತಾದ ಹಲವು ಸ್ಥಳಗಳಲ್ಲಿ ಕಾರ್ಯನಿರತರಾಗಿರುವುದನ್ನು ನೋಡಬಹುದಾಗಿತ್ತು.

## ಕಾರ್ಯಸ್ಥಳ ವಾತಾವರಣ

ಸ್ವಯಂಸೇವಕರು ಗುರುಗಳ ಕೈಯಲ್ಲಿರುವ ಉಪಕರಣಗಳಂತೆ ಮಾತ್ರಇದ್ದು ಪ್ರತಿಯೊಂದು ತಾನೇ ತಾನಾಗಿ ಸರಿಹೋದಂತೆ ಕಾಣುತ್ತಿತ್ತು. ಸರಳ ಜೀವನ ನಡೆಸುವುದರ ಅರ್ಥವು ಸ್ವಯಂಸೇವಕರಿಗೆ ಆಂತರಿಕವಾಗಿ ಅರಿವು ಮೂಡಿಸಿತು. ಸ್ವಯಂಸೇವಕರು ದೇಶದ ವಿವಿಧ ಭಾಗಗಳಿಂದ ಬಂದಿದ್ದರೂ ಕೂಡ ಅವರಲ್ಲಿಒಂದು ರೀತಿಯ ಪ್ರೇಮ ಮತ್ತು ಭ್ರಾತೃತ್ವ ಭಾವನೆಯ ಪಾಶವು ಎಲ್ಲರನ್ನೂ ಒಂದುಗೂಡಿಸಿ, ಅವರೆಲ್ಲರೂ ರಾತ್ರಿಹಗಲೆನ್ನದೆ ಕಾರ್ಯನಿರತರಾಗಿದ್ದರೂ ಸಹ ಅವರಲ್ಲಿದ್ದ ಶಕ್ತಿ, ಹುಮ್ಮಸ್ಸಿನ ಮಟ್ಟ ಕೆಳಗಿಯಲಿಲ್ಲ.

## ಸಹಜ ವನವಿಹಾರ–ಅಜ್ಮೀರ್ ,ರಾಜಸ್ಥಾನ.

10ನೇ ಜುಲೈ 2011 ರಂದು ಸತ್ಸಂಗದ ನಂತರ ಅಜ್ಮೀರ್ ಮತ್ತು ಕಿಶನ್‌ಗಢ್ ಅಭ್ಯಾಸಿಗಳು ಪುಷ್ಕರ್‌ಗೆ ವನವಿಹಾರಕ್ಕಾಗಿ ಹೊರಟರು. ಸುಮಾರು 60 ಜನ ಅಭ್ಯಾಸಿಗಳು ಓರ್ವ ಅಭ್ಯಾಸಿಯ ತೋಟದ ಮನೆಯಲ್ಲಿಒಂದು ದಿನವನ್ನು ಕಳೆದರು. ಸಹಜಮಾರ್ಗ ಸಾಧನೆಯ ಮೂಲತತ್ವಗಳ ಬಗ್ಗೆ ಒಂದು ಪರಸ್ಪರಚರ್ಚೆಯೊಂದಿಗೆ ಈ ಕಾರ್ಯಕ್ರಮವು ಪ್ರಾರಂಭಗೊಂಡಿತು. ಸೋದರ, ಸೋದರಿಯರು ತಮ್ಮ ಸಾಧನೆಯ ಅನುಭವಗಳನ್ನು ಹಂಚಿಕೊಂಡರು. ಅಲ್ಲಿ ಭಾಗವಹಿಸಿದ್ದವರೆಲ್ಲರೂ ಈ ಚರ್ಚೆಯ ನಂತರ ಅವರ ಪ್ರಶ್ನೆಗಳಿಗೆ ಉತ್ತರ ದೊರೆತು ಹಾಗೆಯೇ ಅವರ ಆಧ್ಯಾತ್ಮ ಜೀವನದ ಆಳವಾದ ಅಂಶಗಳನ್ನು ಅರಿತುಕೊಂಡಿದ್ದಾಗಿ ವ್ಯಕ್ತಪಡಿಸಿದರು. ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಭಾವಶಾಲಿಯಾಗಿ ನಡೆಸಿಕೊಟ್ಟರು. ಈ ಸಂದರ್ಭವು ಸಂಜೆಯ ಸತ್ಸಂಗದೊಂದಿಗೆ ಪೂರ್ಣಗೊಂಡಿತು.



ಸಂಪುಟ 4 ಸಂಚಿಕೆ 5 ಸೆಪ್ಟಂಬರ್ 2011
ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ ವಾರ್ತಾಪತ್ರ



## ಯುವ ಕಾರ್ಯಕ್ರಮ, ಕೊಲ್ಕಾತಾ

ಎರಡು ದಿನದ ಯುವಕಾರ್ಯಕ್ರಮವನ್ನು 14 ಮತ್ತು 15ನೇ ಆಗಸ್ಟ್ 2011 ರಂದು ಆಯೋಜಿಸಲಾಗಿತ್ತು. ಅದರಲ್ಲಿ 18 ರಿಂದ 30 ವರ್ಷ ವಯೋಮಾನದ ಉತ್ಸಾಹಿ ಯುವಕರು ಭಾಗವಹಿಸಿದ್ದರು. ಒಂದು ಕಿರುಪರಿಚಯ ಕಾರ್ಯಕ್ರಮದ ನಂತರ ಭಾಗಿಗಳೆಲ್ಲರೂ ಭಂಡಾರದಲ್ಲಿ ತಮಗಾದ ಅನುಭವವನ್ನು ಹಂಚಿಕೊಂಡರು.ಈ ಚರ್ಚೆಯಲ್ಲಿ ಭಂಡಾರದಿಂದ ಹಿಂದಿರುಗಿದ ನಂತರ ಸಾಧಾರಣವಾಗಿ ಪರಿವರ್ತನೆ ಹೊಂದಲು ಒಂದು ರೀತಿಯ ತೀವ್ರ ಪ್ರೇರಕಶಕ್ತಿ ಇರುತ್ತದೆ ಎಂಬುದನ್ನು ಎಲ್ಲರೂ ಏಕಾಭಿಪ್ರಾಯದಿಂದ ಸಮ್ಮತಿಸಿದರು. ಈ ಆಸೆಯು ನಮ್ಮ ದೈನಂದಿನ ಜೀವನದಲ್ಲಿ ಭಂಡಾರದ ಆನಂದದ ಸ್ಥಿತಿ ಮತ್ತು ಅಲ್ಲಿದ್ದ ದಿವ್ಯವಾತಾವರಣದ ಪಡಿಯಚ್ಚನ್ನು ಸೃಷ್ಟಿಸಿಕೊಳ್ಳಲು ಮೊಳಕೆಯೊಡೆಯುತ್ತದೆ. ಈ ಪ್ರೇರಕಶಕ್ತಿಯನ್ನು ನಿರಂತರವಾದ ಪರಿವರ್ತನೆಯಾಗುವಂತೆ ಚಾಲನೆಗೊಳಿಸುವುದು ಪ್ರತಿಯೊಬ್ಬರ ಕೈಯಲ್ಲಿದೆ.

ಸಂಜೆಯ ಸತ್ಸಂಗದ ನಂತರಎಲ್ಲರೂ ಬ್ಯಾಸ್ಕೆಟ್ ಬಾಲ್ ಆಟದಲ್ಲಿ ಪಾಲ್ಗೊಂಡರು ಮತ್ತು ರಾತ್ರಿಯ ಊಟದ ನಂತರ ಚಿತ್ರವನ್ನು ನೋಡುವುದರ ಮೂಲಕ ದಿನವನ್ನು ಮುಗಿಸಿದರು.

ಮರುದಿನ ಒಂದುಕಥೆಯ ಆಧಾರಿತ ಕಲಿಯುವಿಕೆಯ ಅಧಿವೇಶನವನ್ನು ನಡೆಸಿ ಒಳ್ಳೆಯದು ಮತ್ತು ಸುಖಾನುಭವ ನೀಡುವದರ ಮಧ್ಯದಲ್ಲಿ ನಡೆಯುವ ಹೋರಾಟ ಹಾಗೆಯೇ ಸುಖಾನುಭವ ನೀಡುವುದರತ್ತ ನಮ್ಮಲ್ಲಿರುವ ಉತ್ಸುಕತೆ ಮತ್ತುಅದು ಕಟ್ಟಕಡೆಗೆ ಯಾವಾಗಲೂ ಯಾತನೆಗೆ ದಾರಿಮಾಡಿಕೊಡುವುದಕ್ಕೆ ಕಾರಣಗಳೇನು? ಎಂಬುದರ ಬಗ್ಗೆ ಚಿಂತನೆ ಮಾಡಲು ಎಲ್ಲರಿಗೂ ಪ್ರೇರೇಪಿಸಿದರು.

“ಜೀವನದ ಅವಕಾಶಗಳು” ಎನ್ನುವ ಅಧಿವೇಶನದಲ್ಲಿನಮ್ಮ ಪ್ರತಿದಿನದ ಜೀವನದಲ್ಲಿನಾವುಕಾರ್ಯಪ್ರವೃತ್ತರಾಗಿ ಚಲಿಸುವ ವಿವಿಧ ಅವಕಾಶಗಳೊಳಗೆ ಅಲ್ಲಿನ ಸದಸ್ಯರಂತೆಹೇಗೆ ಆ ಅವಕಾಶಗಳಲ್ಲಿ ವರ್ತಿಸುತ್ತೇವೆ ಎಂಬುದನ್ನು ಪರಿಣಾಮಕಾರಿಯಾಗಿ ಹೊರತಂದಿದ್ದಾರೆ. ಇದನ್ನು ತಂಡದವರು ಒಂದು ಲಘು ವಿಡಂಬನೆ ಕಾವ್ಯದಂತೆ ನೆರವೇರಿಸಿದರು. ಈ ಚಟುವಟಿಕೆಯಲ್ಲಿಅದರದ್ದೇ ಆದ ತಮಾಷೆ ಮತ್ತು ನಗುವಿನ ಅಂಶವು ಇದ್ದುಅದು ಒಂದು ಸಂಪೂರ್ಣ ವ್ಯಕ್ತಿತ್ವವನ್ನು ಪಡೆಯುವ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ಮತ್ತು ನಮ್ಮ ಅಸ್ತಿತ್ವದ ಪ್ರತಿಯೊಂದು ಅವಕಾಶದಲ್ಲೂ ನಾವು ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳನ್ನು ಮುಂದುವರಿಸಿಕೊಂಡು ಹೋಗುವುದರ ಅಗತ್ಯವನ್ನು ತೋರಿಸುತ್ತದೆ. ದಿನದ ಅಂತಿಮ ಅಧಿವೇಶನದಲ್ಲಿ ಭಾಗವಹಿಸಿದವರೆಲ್ಲರೂ ಆತ್ಮಾವಲೋಕನ ಮಾಡಿಕೊಂಡು ತಮ್ಮ ಸಾಧನೆಯಲ್ಲಿನ ಅವ್ಯವಸ್ಥೆಗೆ ಕಾರಣಗಳನ್ನು ಮನವರಿಕೆ ಮಾಡಿಕೊಂಡು ಆ ಅಡಚಣೆಗಳನ್ನು ಹೇಗೆ ದಾಟಿ ಜಯಿಸಬಹುದೆಂಬುದರ ಅಗತ್ಯವನ್ನು ಅರಿತುಕೊಂಡರು.

## ಯುವ ಸೆಮಿನಾರ್–ಘಾಜಿಯಾಬಾದ್

ಘಾಜಿಯಾಬಾದ್‌ನಲ್ಲಿಜೂನ್ 10, 2011ರಂದು ಒಂದುಯುವ ಸೆಮಿನಾರ್‌ನು ಆಯೋಜಿಸಲಾಯಿತು. ಸುಮಾರು 50 ಅಭ್ಯಾಸಿಗಳು ಸಮಕಾಲೀನ ಗುರುವಿನ ಪಾತ್ರ ಮತ್ತು ಅವಶ್ಯಕತೆಯ ಬಗ್ಗೆ ಚರ್ಚೆ ನಡೆಸಿದರು. ನಮ್ಮ ಗುರುಗಳ ಬಗ್ಗೆ ಮತ್ತು ಸಂಸ್ಥೆಯ ಇತಿಹಾಸದ ಬಗ್ಗೆ ಅನೇಕ ನೈಜ ಸಂಗತಿಗಳನ್ನು ನಿರೂಪಿಸಿದರು. ಇತರ ಕೇಂದ್ರಗಳಲ್ಲಿ ನಡೆಯುವ ಯುವಕರ ಚಟುವಟಿಕೆಗಳನ್ನು ಕೂಡ ಪ್ರಧಾನವಾಗಿ ಹೇಳಲ್ಪಟ್ಟಿತು. ಸಹಜಮಾರ್ಗ ಸಾಧನೆಯನ್ನು ಸರಿಯಾಗಿ ಮಾಡುವುದರ ಬಗ್ಗೆ, ವಿಶೇಷವಾಗಿ ಶುದ್ಧೀಕರಣದ ಬಗ್ಗೆ ಆಳವಾಗಿ ವಿಚಾರ ಮಾಡಿದರು. ಸ್ವಯಂ ಸೇವಾ ಕಾರ್ಯದ ತಾತ್ಪರ್ಯ ಮತ್ತುಅದನ್ನು ಸರಿಯಾಗಿ ಮಾಡುವ ವಿಧಾನದ ಬಗ್ಗೆ ಒಂದು ಮನಮುಟ್ಟುವಂತಹ ನಿರೂಪಣೆಯನ್ನು ಮಾಡಿದರು. ನಿಯಮಿತವಾದ ರೀತಿಯಲ್ಲಿಆಶ್ರಮದ ಆಡಳಿತ ನಡೆಸಲು ಅಗತ್ಯವಿರುವ ಸ್ವಯಂ ಸೇವೆಯ ಕ್ಷೇತ್ರಗಳ ಬಗ್ಗೆ ಚರ್ಚೆ ನಡೆಸಿದರು. ಆಶ್ರಮದ ಆಡಳಿತ ನಡೆಸುವದರಲ್ಲಿ ನಮ್ಮ ಪಾತ್ರದ ಬಗ್ಗೆ ಕಿರಿಯರು ಅರಿತುಕೊಂಡರು ಮತ್ತುತಮ್ಮ ಸೇವೆಯನ್ನು ನಿಯಮಿತವಾದ ರೀತಿಯಲ್ಲಿ ನೀಡಲು ಸ್ವಇಚ್ಛೆಯಿಂದ ಮುಂದಾದರು.

## ಇಖೋಸ್ ವಾರ್ತಾಪತ್ರದ ಬಗ್ಗೆ ರಸಪ್ರಶ್ನೆಕಾರ್ಯಕ್ರಮ


ಗುಜರಾತಿನ ಜಾಮ್ ನಗರದಲ್ಲಿ 15 ನೇ ತಾರೀಖು 2011 ರಂದು ಒಂದು ರಸಪ್ರಶ್ನೆ ಕಾರ್ಯಕ್ರಮವನ್ನು ಇಖೋಸ್ ವಾರ್ತಾಪತ್ರದ ಬಗ್ಗೆಯೇ ಆಯೋಜಿಸಿದ್ದರು. 30 ನಿಮಿಷಗಳಲ್ಲಿ ಆಬ್ಜೆಕ್ಟೀವ್ ರೀತಿಯ ಪ್ರಶ್ನೆಗಳನ್ನು ಉತ್ತರಿಸಬೇಕಾಗಿತ್ತು. ಭಾಗವಹಿಸಿದವರೆಲ್ಲರಿಗೂ ಇಖೋಸ್ ವಾರ್ತಾಪತ್ರವನ್ನು ಸ್ಪರ್ಧೆಗೆ 20 ನಿಮಿಷಗಳಿಗೆ ಮೊದಲೇ ಓದುವ ಅವಕಾಶವನ್ನು ಭಾಗವಹಿಸುವಿಕೆ ಪರಿಣಾಮಕಾರಿಯಾಗಬೇಕೆಂಬ ಉದ್ದೇಶದಿಂದ ಕೊಟ್ಟಿದ್ದರು.ಸುಮಾರು 20 ಅಭ್ಯಾಸಿಗಳು ಭಾಗವಹಿಸಿದ್ದರು. ಪ್ರತಿ ಸರಿಯಾದ ಉತ್ತರಕ್ಕೆ 5 ಅಂಕವನ್ನು ಹಾಗೂ ಪ್ರತಿ ತಪ್ಪು ಉತ್ತರಕ್ಕೆ 5 ಅಂಕಗಳನ್ನು ಕಳೆಯುವಂತೆ ಏರ್ಪಾಡು ಮಾಡಲಾಗಿತ್ತು. ಸೋದರ ಅಂಜು ಮತ್ತು ಸೋದರ ಛತ್ರಿವಾಲ ಮೊದಲ ಹಾಗೂ ಎರಡನೆಯ ಬಹುಮಾನವನ್ನುಅನುಕ್ರಮವಾಗಿ ಗಳಿಸಿದರು. ಹೆಚ್ಚು ಹೆಚ್ಚು ಅಭ್ಯಾಸಿಗಳು ವಾರ್ತಾಪತ್ರವನ್ನು ನಿಯಮಿತವಾಗಿ ಓದಲಿ ಎಂದು ಅವರಿಗೆ ಪ್ರೋತ್ಸಾಹ ನೀಡಲು ಈ ಮೊದಲ ಹೆಜ್ಜೆಯನ್ನು ಇಡಲಾಯಿತು. ತಿರುಪೂರಿನಲ್ಲಿ ನಡೆದ ಭಂಡಾರದ ವಿಷಯದ ವಿವರಗಳನ್ನೊಳಗೊಂಡಿದ್ದ ವಾರ್ತಾಪತ್ರದ ವಿಶೇಷ ಮುದ್ರಣವು ಎಲ್ಲರಿಂದಲೂ ಪ್ರಶಂಸೆ ಗಳಿಸಿತು.



ಸಂಪುಟ 4 ಸಂಚಿಕೆ 5 ಸೆಪ್ಟಂಬರ್ 2011
ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ ವಾರ್ತಾಪತ್ರ

# ಪ್ರಭಾಕೇಂದ್ರ

## ತೀನ್ಸುಖಿ0ಯಾ ಆಶ್ರಮ, ಅಸ್ಸಾಂ





### ಪ್ರಾರಂಭ

ತೀನ್ಸುಖಿ0ಯಾ ಆಶ್ರಮವು ಚಿಕ್ಕದಾಗಿದೆ0ಯಾದರೂ ದೇಶದಲ್ಲಿ0ಯೇ 3 ನೆ0ಯ ಅತ್ಯಂತ ಹಳೆ0ಯ ಆಶ್ರಮವಾಗಿದೆ. ಇದು ಗುವಾಹಟಿಯಿಂದ 480 ಕಿ.ಮೀ ದೂರದಲ್ಲಿದ್ದು , ಅಲ್ಲಿಗೆ ಅತ್ಯಂತ ಸಮೀಪದ ವಿಮಾನ ನಿಲ್ದಾಣವಾಗಿರುವ ದೀಬ್ರುಗಢದಿಂದ ಸುಮಾರು 1 ಗಂಟೆ ಸಮ0ಯ ತೆಗೆದುಕೊಳ್ಳುತ್ತದೆ. ಅಸ್ಸಾಂ, ಬೆಂಗಾಳಿ ಹಾಗೂ ಹಿಂದಿ ಮಾತನಾಡುವ ಮಿಶ್ರ ಜನಸಂದಣಿ0ಯನ್ನು ಹೊಂದಿರುವ ತೀನ್ಸುಖಿ0ಯಾವು ಅಸ್ಸಾಂನ ವ್ಯಾವಹಾರಿಕ ರಾಜಧಾನಿ0ಯೆಂದೇ ಪ್ರಸಿದ್ಧವಾಗಿದೆ.

ಈ ಹಿಂದೆ ಸಂಸ್ಥೆ0ಯ ಜಂಟಿ ಕಾ0ರ್ಯದರ್ಶಿಗಳಾಗಿದ್ದ ಸಹೋದರ ದಿ.ಕಾಶೀರಾಮ್ ಅಗರ್ವಾಲ್ ಅವರು ತೀನ್ಸುಖಿ0ಯಾದ ಪ್ರಥಮ ಅಭ್ಯಾಸಿ0ಯಾಗಿದ್ದರು. ಅಭ್ಯಾಸಿಗಳ ಸಂಖ್ಯೆ ಬೆಳೆದಂತೆ, ಕೇಂದ್ರದ ಅಭ್ಯಾಸಿಗಳು ನಗರದಕೇಂದ್ರ ಭಾಗದಲ್ಲಿ 3500 ಚ.ಅ ಅಳತೆ0ಯ, ಸುತ್ತಲೂ ಸುಮಾರು 4000 ಚ.ಅ ಹೊರಾಂಗಣವನ್ನು ಹೊಂದಿರುವ ಒಂದು ಹಳೆ0ಯ ಗೋದಾಮನ್ನು ಹೊಂದುವಲ್ಲಿ 0ಯಶಸ್ವಿ0ಯಾದರು. ಸೆಂಟ್ರಲ್ ಬಸ್ ಡಿಪೋದಿಂದ ಆಶ್ರಮವು ಬಹಳ ಹತ್ತಿರವಿದ್ದು ರೈಲ್ವೆ ನಿಲ್ದಾಣದಿಂದ 3 ಕಿ.ಮೀ ದೂರದಲ್ಲಿದೆ.

### ಬಾಬೂಜಿ0ಯವರ ಮಾರ್ಗದರ್ಶನದ ಕಾ0ರ್ಯ

ತೀನ್ಸುಖಿ0ಯಾ ಕೇಂದ್ರಕ್ಕೆ ಬಾಬೂಜಿ ಮಹಾರಾಜರು 1960 ರಲ್ಲಿ ಭೇಟಿ ನೀಡಿದ್ದರು. ಆ ದಿನಗಳಲ್ಲಿ ಅವರು ಭಾರತದ ಈಶಾನ್ಯ ಭಾಗದ ಕೊನೆ0ಯಲ್ಲಿರುವ ಈ ಸ್ಥಳವನ್ನು ತಲುಪಲು ರೈಲಿನಲ್ಲಿ ಪ್ರ0ಯಾಣಮಾಡಿ, ನಂತರ ಬ್ರಹ್ಮಪುತ್ರ ನದಿ0ಯನ್ನು ದಾಟಲು ದೋಣಿ0ಯಲ್ಲಿ ಪ್ರ0ಯಾಣಮಾಡಿ ಬರುತ್ತಿದ್ದರು. ನಂತರಅವರು 1965, 1968, 1970, 1973, 1975 ಮತ್ತು 1977 ರಲ್ಲಿ ತೀನ್ಸುಖಿ0ಯಾಗೆ ಭೇಟಿ ನೀಡಿದ್ದರು.

1971 ನವೆಂಬರ್ 95 ರಂದು ದೇಶದೆಲ್ಲಡೆಯಿಂದ ನೆರೆದಿದ್ದ ಅಭ್ಯಾಸಿಗಳೊಂದಿಗೆ ಬಾಬೂಜಿ0ಯವರು ಆಶ್ರಮವನ್ನು ಉದ್ಘಾಟಿಸಿದರು. ಈ ಸುಸಂದರ್ಭದಲ್ಲಿಅವರು “ಸಹಜಮಾರ್ಗದಲ್ಲಿ ಪ್ರಾಣಾಹುತಿ0ಯ ಪರಿಮಳವು ಅಂತರಂಗದಲ್ಲಿ ನೆಲೆಸುವುದೆಂಬುದು ನಿಶ್ಚಿತವೇ, ಆದರೆ ಪ್ರೇಮ ಹಾಗೂ ಭಕ್ತಿ–ಈ ಅಂಶಗಳು ಇನ್ನೂ ಹಿಂದುಳಿದಿವೆ. ಧ್ಯಾನದ ಪ್ರಕ್ರಿ0ಯೆ0ಯೊಂದಿಗೆ ಇವುಗಳೂ ಸಹ ಸಹಜವಾಗಿ0ಯೇ ಅಂತರ್ಗತವಾಗಬೇಕಾಗಿರುವುದು ಬಹಳ ಅವಶ್ಯವಾಗಿದೆ. ನಾನು ಈ ಎಲ್ಲಾ ಅಂಶಗಳೂ ಸಮ್ಮಿಲನಗೊಳ್ಳಬೇಕೆಂಬುದನ್ನು ಒತ್ತಿ ಹೇಳುವ ಅವಶ್ಯಕತೆಯಿದೆ. ಏಕೆಂದರೆಇದನ್ನು ಮಾಡುವುದರಿಂದ ಸಾಧಕನು ತನ್ನ ಗುರಿ0ಯನ್ನು ಬಹುಬೇಗ ಮುಟ್ಟಬಲ್ಲನು” ಎಂದು ಹೇಳಿದರು.

ಚಾರೀಜಿ ಮಹಾರಾಜರು 1985, 1986 ಮತ್ತು 2002 ರಲ್ಲಿ ಈ ಕೇಂದ್ರಕ್ಕೆ ಭೇಟಿ ನೀಡಿದ್ದಾರೆ. ಅವರ 2002ರ ತೀನ್ಸುಖಿ0ಯಾ ಹಾಗೂ ದಿಗ್ಬೋ0ಯ್ ಭೇಟಿ0ಯಲ್ಲಿ ಭಾರತ ಮತ್ತು ಹೊರ ದೇಶಗಳಿಂದ ಸುಮಾರು 700 ಅಭ್ಯಾಸಿಗಳು ಸೇರಿದ್ದರು. 2002 ನವೆಂಬರ್ 25 ರಂದು ಏರ್ಪಡಿಸಿದ್ದ ತೀನ್ಸುಖಿ0ಯಾ ಕೇಂದ್ರದ ರಜತ ಮಹೋತ್ಸವದಲ್ಲಿಅಸ್ಸಾಂ ಹಾಗೂ ಈಶಾನ್ಯ ಭಾಗದಿಂದ ಸುಮಾರು 200 ಅಭ್ಯಾಸಿಗಳು ಭಾಗವಹಿಸಿದ್ದರು.

### ನವೀಕರಣ

ಗುರುಗಳ ಕೋಣೆ ,ಅಡುಗೆಮನೆ, ಭೋಜನದಕೋಣೆ ಹಾಗೂ ಸುಂದರವಾದ ಉದ್ಯಾನವಿರುವ ಹಸಿರು ವಲ0ಯವನ್ನು ಹೊಂದಿರುವ ಈ ಆಶ್ರಮವುಒಂದು ಮಹಡಿ0ಯ ಕಟ್ಟಡವಾಗಿದ್ದಿತು. ಗುರುಗಳ ಅನುಮತಿ0ಯನ್ನು ಪಡೆದು







ಪೂರ್ಣಗೊಳಿಸಲಾಯಿತು. ಇದರ ಫಲವಾಗಿ ಮೊದಲನೇ ಮಹಡಿ0ುಲ್ಲಿ 3600 ಚ.ಅ ವಿಸ್ತೀರ್ಣದ , ಮಧ್ಯದಲ್ಲೆಲ್ಲಿ0ುೂ ಸ್ತಂಭಗಳಿರದ ಹಾಗೂ ಉತ್ತಮವಾದ ಮುಕ್ತ ವಾ0ುುಸಂಚಾರವಿರುವ ಭವ್ಯವಾದ ಧ್ಯಾನಮಂದಿರವು ನಿರ್ಮಾಣವಾಯಿತು. ಗುರುಗಳ ಅನುಮತಿ0ೊಂದಿಗೆ 2000 ಫೆಬ್ರವರಿ 2 ರಿಂದ ಈ ಹೊಸ ಸೌಲಭ್ಯವನ್ನು ಬಳಸಲಾಗುತ್ತಿದೆ.

## ಚಟುವಟಿಕೆಗಳು

ಈಗ ಆಶ್ರಮದಲ್ಲಿ ಭಾನುವಾರದ ಸತ್ಸಂಗಗಳಲ್ಲಿ ಸುಮಾರು 125 ಅಭ್ಯಾಸಿಗಳು ಭಾಗವಹಿಸುತ್ತಿದ್ದಾರೆ. ತೀನ್ಸುಖಿ0ುಾ ಆಶ್ರಮದಲ್ಲಿ 0ುುವಜನರ ಚಟುವಟಿಕೆಗಳು ಪ್ರಗತಿಪರವಾಗಿ ಹೆಚ್ಚಾಗಿ ನಡೆ0ುುತ್ತಿವೆ. ಆಶ್ರಮವನ್ನು ಅಭ್ಯಾಸಿ ತರಬೇತಿ ಕಾ0ುರ್ಕ್ರಮಗಳು, ಮುಕ್ತಸಭೆಗಳು ಇನ್ನೂ ಮುಂತಾದವುಗಳಿಗಾಗಿ ತೀನ್ಸುಖಿ0ುಾ ಕೇಂದ್ರವಷ್ಟೇ ಅಲ್ಲದೆ ಇತರ ಉಪ ಕೇಂದ್ರಗಳೂ ಸಹ ಬಳಸಿಕೊಳ್ಳುತ್ತಿವೆ. ಅಭ್ಯಾಸಿ ಗುರುತಿನ ಚೀಟಿಗಳು, ಪ್ರಕಟಣೆಗಳ ವಿತರಣೆ ಹಾಗೂ ಈಶಾನ್ಯ ಭಾಗದ ಅಭ್ಯಾಸಿಗಳ ಸತ್ಸಂಗದ ಹಾಜರಾತಿ0ು ದಾಖಲಾತಿ ಇವುಗಳಿಗೆ ಸಂಬಂಧಿಸಿದ ಕೆಲಸಗಳನ್ನೂ ಸಹ ನೋಡಿಕೊಳ್ಳುತ್ತಿದೆ. ಉತ್ತರ ಭಾರತದಲ್ಲಿ ಸಂಸ್ಥೆ0ು ಅಭಿವೃದ್ಧಿಗೆ ಹಾಗೂ ನಂತರ ಅಸ್ತಿತ್ವಕ್ಕೆ ಬಂದಂತಹ ದಿಗ್ಬೋ0ು್, ಡಾಂಡೂಮ, ನಹಾರ್ಕಾಟಿ0ುಾ, ಡಿಬ್ರುಗಢ್, ಸಿಬ್ಸಾಗರ್, ಜೋರ್ಹಟ್, ನರ್ಝೀರಾ, ದುಲಿ0ುಾಜನ್, ಜಗುನ್ ಮತ್ತುಉತ್ತರ ಲಖೀಂಪುರ್ ಹೀಗೆ ಅನೇಕ ಉಪ ಕೇಂದ್ರಗಳ ಬೆಳವಣಿಗೆಗೆ ಕೇಂದ್ರವು ಪ್ರೋತ್ಸಾಹ ನೀಡುತ್ತಿದೆ. ಚಿಕ್ಕದಾದರೂ ತೀನ್ಸುಖಿ0ುಾದ ಆಶ್ರಮವು ಭಾರತದ ಈಶಾನ್ಯ ಭಾಗದಲ್ಲಿ ಸಂಸ್ಥೆ0ು ಬೆಳವಣಿಗೆ0ುಲ್ಲಿ ಅತ್ಯಂತ ಮಹತ್ತರವಾದ ಪಾತ್ರವನ್ನು ವಹಿಸುತ್ತಿದೆ.








## ಪ್ರಶಿಕ್ಷಕರ ವಿವಿಧ ಕೇಂದ್ರಗಳಿಗೆ ಪ್ರಯಾಣದ ಕಾರ್ಯಕ್ರಮ–ದಕ್ಷಿಣ ಕರ್ನಾಟಕ ಕೇಂದ್ರ

2000 ಜೂನ್ 25 ಹಾಗೂ 26 ರಂದು ಕರ್ನಾಟಕದ ಎಲ್ಲಾ ಕೇಂದ್ರಗಳಲ್ಲಿ 2 ದಿನದ ಪ್ರಶಿಕ್ಷಕರ ವಿವಿಧ ಕೇಂದ್ರಗಳಿಗೆ ಪ್ರಯಾಣದ ಕಾರ್ಯಕ್ರಮವನ್ನು ಆ0ೋಜಿಸಲಾಗಿತ್ತು. ಏಕಕಾಲಕ್ಕೆ ಎಲ್ಲಾ ಕೇಂದ್ರಗಳಲ್ಲಿ ನಡೆದ ಈ ಕಾರ್ಯಕ್ರಮವು ವೈಯಕ್ತಿಕ ಬೈಠಕಗಳು, ಗೃಹಕೂಟಗಳು ಹಾಗೂ ಭಾನುವಾರದ ಪೂರ್ಣದಿನದ ಕಾರ್ಯಕ್ರಮಗಳನ್ನು ಒಳಗೊಂಡಿತ್ತು.





ಈ ಕಾರ್ಯಕ್ರಮವನ್ನು ಸ್ವ0ುಂ ಸೇವಕರ ಹಾಗೂ 58 ಪ್ರಶಿಕ್ಷಕರ ಸಹಾಯದಿಂದ ಸುಮಾರು 32 ಕೇಂದ್ರಗಳಲ್ಲಿ ನಡೆಸಲಾಯಿತು. ಜೂನ್ 25 ರಂದು ಒಟ್ಟು 30 ಗೃಹಕೂಟಗಳನ್ನು ನಡೆಸಲಾಯಿತು. ಸಾಧನೆಯ ವಿವಿಧ ವಿಷಯಾಂಶಗಳನ್ನು ಕುರಿತು ಚರ್ಚಿಸಲಾಯಿತು ಹಾಗೂ ಅವುಗಳ ಬಗ್ಗೆ ಸವಿವರವಾಗಿ ಹೇಳಲಾಯಿತು. ಅನೇಕರು ಅಭ್ಯಾಸವನ್ನು ಪ್ರಾರಂಭಿಸುವ ಆಸಕ್ತಿಯನ್ನು ತೋರಿದರು.

ಜೂನ್ 26ರಂದು ಪೂರ್ಣದಿನದ ಕಾರ್ಯಕ್ರಮವು ಭಂಡಾರದ ಪೂರ್ವಸಿದ್ಧತೆಯ ಬಗ್ಗೆ ಚರ್ಚೆಯೊಂದಿಗೆ ಆರಂಭಗೊಂಡಿತು. ನಂತರ ಪ್ರಶ್ನೋತ್ತರ ಕಾರ್ಯಕ್ರಮವಿದ್ದಿತು. ಆಶುಭಾಷಣ ಕಾರ್ಯಕ್ರಮದಲ್ಲಿ ಅಭ್ಯಾಸಿಗಳೆಲ್ಲ ಬಹಳ ಉತ್ಸಾಹದಿಂದ ಭಾಗವಹಿಸಿದರು.

ಪ್ರಥಮಬಾರಿಗೆ ನಡೆದಈ ಕಾರ್ಯಕ್ರಮವನ್ನು ಭಾಗವಹಿಸಿದವರೆಲ್ಲರೂ ಸ್ವಾಗತಿಸಿದರು ಹಾಗೂ ಮೆಚ್ಚಿಕೊಂಡರು. ಪ್ರಶಿಕ್ಷಕರ ಸಹಾ0ುದಿಂದ ತಮ್ಮ ಸಂದೇಹಗಳನ್ನು ಸ್ಪಷ್ಟಪಡಿಕೊಳ್ಳಲು ಅವಕಾಶ ಸಿಕ್ಕಿದ್ದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು.

ಅಭ್ಯಾಸಿಗಳು ತಮ್ಮನ್ನು ಈ ಸೇವೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಬದ್ಧರಾಗಿದ್ದುದು ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಯಿತು.

**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**

© 2011 Shri Ram Chandra Mission ("SRCM"). All rights reserved. “Shri Ram Chandra Mission", "Sahaj Marg", “SRCM”, “Constant Remembrance” and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.